ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

04 ಜೂನ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 85 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ವಿಧಾನ ಸೌಧದ ಆವರಣದಲ್ಲಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಕಾಣಿಸಿಕೊಂಡಿದ್ದು...


ಆತ್ಮವಿಶ್ವಾಸದ ಆಸರೆ ಸಿಕ್ಕರೆ, ಅವಳು ಭೂಮಿಯನ್ನೇ ಸ್ವರ್ಗ ಮಾಡಬಲ್ಲಳು » 2


ಶಾಲಾ ಆವರಣಗಳಲ್ಲಿ ಚಿತ್ರೀಕರಣಕ್ಕೆ ನಿಷೇಧ » 3


ಡಿಕೆಶಿ ಪ್ರಮಾಣವಚನ: ಕಾರ್ಯಕರ್ತರಿಂದ ಸಂಭ್ರಮಾಚರಣೆ » 4

# 25ನೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್

## ಜಿ.ಪರಮೇಶ್ವರ್‌ಗೆ ಉಪ ಮುಖ್ಯಮಂತ್ರಿ ಪಟ್ಟ | ಸಿದ್ದರಾಮಯ್ಯ ಕೋಟಾದಲ್ಲಿ ಸಂಪುಟ ಸೇರಿದ ಯತೀಂದ್ರ

• ಪ್ರಜೋದಯ ವರದಿ

**ಬೆಂಗಳೂರು :** ಕರ್ನಾಟಕದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಿದರು. ಮುಖ್ಯಮಂತ್ರಿ ಅವರೊಂದಿಗೆ 13 ಮಂದಿ ಸಚಿವರು ಪ್ರಮಾಣ ವಚನ ಪಡೆದುಕೊಳ್ಳುವುದರೊಂದಿಗೆ ಮೊದಲ ಕಂತಿನ ಸಂಪುಟ ಅಸ್ತಿತ್ವಕ್ಕೆ ಬಂದಿದೆ.

ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ಸಂಜೆ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮುಖ್ಯಮಂತ್ರಿ ಹಾಗು ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.

ಉಪಮುಖ್ಯಮಂತ್ರಿಯಾಗಿ ಡಾ.ಜಿ. ಪರಮೇಶ್ವರ್, ಸಂಪುಟ ದರ್ಜೆ ಸಚಿವರಾಗಿ ಕೆ. ಹೆಚ್ ಮುನಿಯಪ್ಪ, ಕೆ.ಜೆ.ಜಾರ್ಜ್, ಭೈರತಿ ಸುರೇಶ್, ಶರಣ ಪ್ರಕಾಶ್ ಪಾಟೀಲ್, ಎಂ.ಬಿ.ಪಾಟೀಲ್, ರಾಮಲಿಂಗಾ ರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ, ಯು.ಟಿ ಖಾದರ್, ಈಶ್ವರ್ ಖಂಡ್ರೆ, ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಗೌಪ್ಯತೆಯ ಪ್ರಮಾಣ ಸ್ವೀಕರಿಸಿದರು.


ಸಿದ್ದರಾಮಯ್ಯ ಅವರ ಸಂಪುಟದಲ್ಲಿದ್ದ ಬಹುತೇಕ ಹಿರಿಯರು ಮೊದಲ ಕಂತಿನಲ್ಲಿ ಅವಕಾಶ ಪಡೆದಿದ್ದಾರೆ. ಮೇಲ್ಮನೆ ಸದಸ್ಯ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಅವರು ನಿರೀಕ್ಷೆಯಂತೆ ಸಂಪುಟಕ್ಕೆ ಸೇರ್ಪಡೆ ಯಾಗಿದ್ದಾರೆ.

ಲೋಕಭವನದ ಗಾಜಿನ ಮನೆಯಲ್ಲಿ ನಡೆದ ಸರಳ ಸಮಾರಂಭವು ನಿಗದಿತ ಸಮಯಕ್ಕೆ ನೆರವೇರಿತು. ನಿರ್ಗಮಿತ ಮುಖ್ಯ ಮಂತ್ರಿ ಸಿದ್ದರಾಮಯ್ಯ,ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯ ದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ, ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ, ಕೇರಳ ಮುಖ್ಯಮಂತ್ರಿ ಸತೀಶನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖವಿಂದರ್ ಸಿಂಗ್, ಹೈಕೋರ್ಟ್ ಮುಖ್ಯ ನ್ಯಾಯ ಮೂರ್ತಿ ವಿಬುಬಕ್ರು, ಹಲವು ಮಠಾಧೀಶರು, ಧರ್ಮಗುರುಗಳು, ಕೈಗಾರಿಕೋದ್ಯಮಿಗಳು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗು ಸಚಿವರ ಕುಟುಂಬದ ಸದಸ್ಯರು, ಅಧಿಕಾರಿ ವರ್ಗ, ಕಾಂಗ್ರೆಸ್‌ನ ಅನೇಕ ಮುಖಂಡರು ಹಾಜರಿದ್ದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವೀರ ಗಂಗಾಧರ ಅಜ್ಜಯ್ಯ ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ, ಉಳಿದವರು ದೇವರು ಹಾಗು ಶ್ರದ್ಧೆಯ ಹೆಸರಲ್ಲಿ ಪ್ರಮಾಣ ವಚನ ಪಡೆದುಕೊಂಡರು.







## ಬಿ.ಕೆ.ಹರಿಪ್ರಸಾದ್‌ಗೆ ಕೆಪಿಸಿಸಿ ಪಟ್ಟ

• ಪ್ರಜೋದಯ ವರದಿ



**ಬೆಂಗಳೂರು :** ನೇರ ಚುನಾವಣೆ ಯನ್ನು ಎದುರಿಸದೆ ದೆಹಲಿಯಲ್ಲಿದ್ದು ಕೊಂಡು ಇಂದಿರಾಗಾಂಧಿ ನಂತರ ಸೋನಿಯಾಗಾಂಧಿ ಕುಟುಂಬ ದೊಂ ದಿಗೆ ಒಡನಾಟ ವಿಟ್ಟು ಕೊಂಡು ಹಲವು ವರ್ಷಗಳ ಕಾಲ ರಾಷ್ಟ್ರ ರಾಜ ಕಾರಣ ದಲ್ಲಿ ಅನೇಕ ಹುದ್ದೆಗಳನ್ನು ನಿರ್ವಹಿಸಿದ ಬಿ.ಕೆ. ಹರಿಪ್ರಸಾದ್ ಅವರು ಈ ಬಾರಿ ಸಂಪುಟ ಸೇರಲೇ ಬೇಕೆಂಬ ಇರಾದೆಯೊಂದಿಗೆ ದೆಹಲಿ ಮಟ್ಟದಲ್ಲಿ ಬಹುದೊಡ್ಡ ಲಾಬಿ ಮಾಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸೇರ್ಪಡೆಯಾಗಲು ಅವಕಾಶ ಸಿಗದ ಕಾರಣಕ್ಕಾಗಿ ಸಿದ್ದರಾಮಯ್ಯ ಅವರ ಆಡಳಿತವನ್ನು ಟೀಕೆ ಮಾಡುತ್ತಾ, ಕಳೆದ ಕೆಲವು ದಿನಗಳಿಂದ ಅವ ರೊಂದಿಗೆ ರಾಜಿ ಮಾಡಿ ಕೊಂಡಿದ್ದ ಹರಿಪ್ರಸಾದ್ ಅವರು ಹೊಸ ಸಂಪುಟಕ್ಕೆ ಸೇರ್ಪಡೆ ಯಾಗುವ ಬಯಕೆಯನ್ನು ತೋಡಿಕೊಂಡಿದ್ದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಹಾಗು ಮಂತ್ರಿ ಸ್ಥಾನದ ಬೇಡಿಕೆ ಇಟ್ಟು ಕೊನೆಗೆ ಮಂತ್ರಿ ಸ್ಥಾನದ ಕಡೆಗೆ ಸತೀಶ್ ಜಾರಕಿಹೊಳಿ ಅವರು ಆಸಕ್ತಿ ತೋರಿದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಹರಿಪ್ರಸಾದ್ ಹೆಗಲಿಗೆ ಕಟ್ಟುವ ಜವಾಬ್ದಾರಿಯ ನಿರ್ಧಾರ ತೆಗೆದುಕೊಂಡಿದೆ ಎಂದು ತಿಳಿದು ಬಂದಿದೆ.

## ಪ್ರತಿಪಕ್ಷ ನಾಯಕರ ಗೈರು

• ಪ್ರಜೋದಯ ವರದಿ

**ಬೆಂಗಳೂರು :** ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರತಿಪಕ್ಷಗಳ ನಾಯಕರು ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಭಾಗಿಯಾಗುವುದು ಸಂಪ್ರದಾಯ. ಆದರೆ, ಬುಧವಾರ ನಡೆದ ಡಿ.ಕೆ.ಶಿವಕುಮಾರ್ ಅವರ ಪದಗ್ರಹಣ ಸಮಾರಂಭದಲ್ಲಿ ಬಿಜೆಪಿ ಹಾಗು ಜೆಡಿಎಸ್‌ನ ಮುಂಚೂಣಿ ನಾಯಕರು ಗೈರು ಹಾಜರಾಗಿದ್ದರು.

ವಿಧಾನಸಭೆಯಲ್ಲಿ ಬಿಜೆಪಿ ಪ್ರತಿಪಕ್ಷ ಸ್ಥಾನವನ್ನು ನಿರ್ವಹಿಸುತ್ತಿದೆ. ಸಂಪ್ರದಾಯ ಪ್ರಕಾರ ಸರ್ಕಾರದ ಕಡೆಯಿಂದ ಆಹ್ವಾನ ತಲುಪಿದ್ದರೂ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರಾಗಲಿ, ಮೇಲ್ಮನೆಯ ಪ್ರತಿಪಕ್ಷ ನಾಯಕರಾಗಲಿ ಹಾಜರಿರಲಿಲ್ಲ. ಜೆಡಿಎಸ್‌ನ ಸಭಾ ನಾಯಕರು ಕೂಡ ಕಾರ್ಯಕ್ರಮದಲ್ಲಿ ಭಾಗಿಯಾಗಲಿಲ್ಲ.

## ದೇವೇಗೌಡ-ಯಡಿಯೂರಪ್ಪ ಆಶೀರ್ವಾದ ಪಡೆದ ಡಿ.ಕೆ.ಶಿವಕುಮಾರ್





• ಪ್ರಜೋದಯ ವರದಿ

**ಬೆಂಗಳೂರು :** ಮುಖ್ಯಮಂತ್ರಿ ಪದವಿ ಘೋಷಿಸಲ್ಪಟ್ಟ ನಂತರ ಹೆಚ್ಚು ಪ್ರತಿ ಕ್ರಿಯೆ ತೋರದೆ ಜಾಣ್ಮೆಯ ನಡೆಗೆ ಮುಂದಾದ ಡಿ.ಕೆ.ಶಿವಕುಮಾರ್ ಅವರು ಬುಧವಾರ ಪ್ರಮಾಣ ವಚನಕ್ಕೂ ಮುನ್ನ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆಶೀ ರ್ವಾದವನ್ನು ಪಡೆದುಕೊಂಡರು.

ಮೊದಲು ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿದ ಡಿ.ಕೆ.ಶಿವಕುಮಾರ್ ಅವರನ್ನು ಖುದ್ದು ಯಡಿಯೂರಪ್ಪ ಅವರೇ ಸ್ವಾಗತಿಸಿ, ಅಭಿನಂದಿಸಿದರು. ಬಳಿಕ ಸದಾಶಿವನಗರದಲ್ಲಿರುವ ದೇವೇಗೌಡರ ನಿವಾಸಕ್ಕೆ ಭೇಟಿ ಕೊಟ್ಟ ಶಿವಕುಮಾರ್ ಅವರು, ದೇವೇಗೌಡರ ಕಾಲಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದುಕೊಂಡರು.

ಹಿರಿಯ ನಾಯಕರ ಆಶೀರ್ವಾದ ಪಡೆದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು, ಯಡಿಯೂರಪ್ಪ, ದೇವೇಗೌಡರು ರಾಜ್ಯದ ಹಿರಿಯರು, ಅವರು ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆಂದು ಸ್ಮರಿಸಿಕೊಂಡರು.

## ಹಲವು ಮಠಾಧೀಶರು ಭಾಗಿ

**ಬೆಂಗಳೂರು :** ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ರಾಜ್ಯದ ಅನೇಕ ಮಠಾಧೀಶರು, ಮುಸ್ಲಿಂ ಮತ್ತು ಕ್ರೈಸ್ತ ಧರ್ಮದ ಗುರುಗಳು ಭಾಗಿಯಾದದ್ದು ವಿಶೇಷ. ರಾಜ್ಯದ ಅನೇಕ ವೀರಶೈವ-ಲಿಂಗಾಯತ ಮಠಾಧೀಶರು, ಹಿಂದುಳಿದ ವರ್ಗಗಳು, ಕುರುಬ ಸಮುದಾಯ, ಒಕ್ಕಲಿಗ ಹಾಗು ದಲಿತ ಸಮುದಾಯದ ಸ್ವಾಮೀಜಿಗಳು, ಅನೇಕ ಧರ್ಮಗುರುಗಳು ಹಾಜರಿದ್ದರು. ಪ್ರಮಾಣ ವಚನಕ್ಕೂ ಮೊದಲು ಡಿ.ಕೆ.ಶಿವಕುಮಾರ್ ಅವರು ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿ, ಮಠಾಧೀಶರೊಂದಿಗೆ ಶುಭಾಶಯ ವಿನಿಮಯ ಮಾಡಿಕೊಂಡರು.

## ಹೆಚ್.ಕೆ.ಪಾಟೀಲ್‌ಗೆ ಸ್ಪೀಕರ್ ಸ್ಥಾನ ಸಂಭವ



• ಪ್ರಜೋದಯ ವರದಿ

**ಬೆಂಗಳೂರು :** ಹಿರಿತನ ಮತ್ತು ಅನುಭವದ ಆಧಾರದ ಮೇಲೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ಹೆಚ್.ಕೆ.ಪಾಟೀಲ್ ಅವರು ಮತ್ತೆ ಸಂಪುಟ ಸೇರುತ್ತಾರೆಂಬ ನಿರೀಕ್ಷೆ ಇತ್ತು. ಆದರೆ, ಅವರಿಗೆ ಅವಕಾಶ ಲಭ್ಯವಾಗಿಲ್ಲ. ಪಾಟೀಲ್ ಅವರು ಹೊಂದಿರುವ ಚಾಣಾಕ್ಷ್ಯತನ ಹಾಗು ಸದನವನ್ನು ನಿಯಂತ್ರಿಸ ಬಲ್ಲರೆಂಬ ಉದ್ದೇಶಕ್ಕಾಗಿ ಅವರಿಗೆ ವಿಧಾನ ಸಭೆಯ ಅಧ್ಯಕ್ಷ ಸ್ಥಾನವನ್ನು ನೀಡುವ ಸಾಧ್ಯತೆಗಳಿವೆ.

ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ವಿಧಾನಸಭೆ ಅಧ್ಯಕ್ಷ ಸ್ಥಾನವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದ ಯು.ಟಿ.ಖಾದರ್ ಅವರಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಿರುವುದರಿಂದ ಆ ಸ್ಥಾನವನ್ನು ಹೆಚ್.ಕೆ.ಪಾಟೀಲ್ ಅವರು ತುಂಬಲಿದ್ದಾರೆಂದು ಹೇಳಲಾಗುತ್ತಿದೆ.

## ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ : ಸಿ.ಎಂ.

• ಪ್ರಜೋದಯ ವರದಿ

▪ ರಸ್ತೆಗಳ ನಿರ್ಮಾಣಕ್ಕೆ 2000 ಕೋ.ರೂ

▪ ಗ್ರಾ.ಪಂ ಮಟ್ಟದಲ್ಲಿ ಭಾರತ್ ಜೋಡೋ ಯುವಕ ಸಂಘ



**ಬೆಂಗಳೂರು :** ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ರಾಜ್ಯದ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೇರಿ ಆರು ಮಹತ್ವದ ಘೋಷಣೆಗಳನ್ನು ಪ್ರಕಟಿಸಿದ್ದಾರೆ.

ಬುಧವಾರ ಸಂಜೆ ವಿಧಾನಸೌಧದಲ್ಲಿ ನಡೆದ ತಮ್ಮ ನೇತೃತ್ವದ ಮೊದಲ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಈ ಮೊದಲು ವಿವಿಧ ಮಾದರಿಯ ವಿದ್ಯಾರ್ಥಿಗಳಿಗೆ 1,300 ರೂ.ದಿಂದ 1,500 ರೂ ವಾರ್ಷಿಕ ಬಸ್ ಪಾಸ್ ದರ ನಿಗದಿಪಡಿಸಲಾಗಿತ್ತು. ಈಗ ಎಲ್ಲಾ ವಿದ್ಯಾರ್ಥಿಗಳು ಉಚಿತ ಬಸ್ ಪಾಸ್ ಪಡೆಯಲಿದ್ದಾರೆ. ಕೇವಲ ಹುಡುಗಿಯರಿಗೆ ಉಚಿತ ಬಸ್ ಏಕೆಂದು ವಿದ್ಯಾರ್ಥಿಗಳು ಕೇಳುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳಿಗೂ ಯಾವುದೇ ಶುಲ್ಕವಿಲ್ಲದೇ ಬಸ್ ಪಾಸ್‌ಗಳನ್ನು ನೀಡಲಿದ್ದೇವೆ. ಇದು ಎಲ್ಲಾ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಉದ್ಯೋಗ ಹುಡುಕುತ್ತಿರುವ ನಿರುದ್ಯೋಗಿಗಳು ಸರ್ಕಾರದಲ್ಲಿ ನೋಂದಾಯಿಸಿಕೊಳ್ಳಬೇಕು. ನಾವು ಕಂಪನಿಗಳೊಂದಿಗೆ ಮಾತನಾಡಿ ಅವರಿಗೆ ಅಗತ್ಯವಿರುವ ಉದ್ಯೋಗಗಳನ್ನು ಒದಗಿಸಲು ವ್ಯವಸ್ಥೆ ಮಾಡುತ್ತೇವೆ. ಉದ್ಯೋಗಕ್ಕಾಗಿ ಯುವ ಸಮುದಾಯಕ್ಕೆ ಸರ್ಕಾರವೇ ತರಬೇತಿ ನೀಡುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು.

ಗ್ರಾಮಗಳಲ್ಲಿ ಭಾರತ್ ಜೋಡೋ ಯೂತ್ ಕ್ಲಬ್‌ಗಳನ್ನು ರಚಿಸಲು ನಿರ್ಧರಿಸಲಾಗಿದೆ. ಈ ಯುವ ಸಂಘಗಳಿಗೆ ಸರ್ಕಾರ 10 ಲಕ್ಷ ರೂ.ಗಳನ್ನು ನೀಡಲಿದೆ. ಇತರ ಕೆಟ್ಟ ಅಭ್ಯಾಸಗಳಿಗೆ ಆಶ್ರಯಿಸದೆ, ಯುವಕರು ಸಮಾಜ ಕಟ್ಟುವ ಕೆಲಸದಲ್ಲಿ ನಿರತರಾಗಬೇಕೆಂಬ ಉದ್ದೇಶದಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ. 10,000 ಭಾರತ್ ಜೋಡೋ ಕ್ಲಬ್‌ಗಳನ್ನು ರಚಿಸುವುದು ನಮ್ಮ ಗುರಿಯಾಗಿದೆ ಎಂದರು.

ನಗರ ಭಾಗದ ರಸ್ತೆಗಳ ಅಭಿವೃದ್ಧಿಗೆ 2,000 ಕೋ.ರೂ. ಮೀಸಲಿಡುವ ತೀರ್ಮಾನವನ್ನೂ, ಡಿ.ಕೆ.ಶಿವಕುಮಾರ್ ಅವರ ಮೊದಲ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ. ಅದೇ ರೀತಿ ಗ್ರಾಮೀಣ ಭಾಗದ ಅಭಿವೃದ್ಧಿ ಮತ್ತು ರೈತರ ಬದುಕನ್ನು ಹಸನುಗೊಳಿಸುವತ್ತ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಮುಖ್ಯಮಂತ್ರಿ ಪದವಿ ಸಿಗುವುದು ಸ್ವಲ್ಪ ತಡವಾಯಿತು. ಆದರೂ ಸಿದ್ದರಾಮಯ್ಯ ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಾಗಿ ಹೇಳಿ, ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿ ನನಗೆ ಅವಕಾಶ ನೀಡಿದ್ದಾರೆ. ಮುಖ್ಯಮಂತ್ರಿ ಪಟ್ಟ ನನ್ನದಲ್ಲ, ಇದು ನಾಡಿನ ಜನರದ್ದು. ಜನರ ಆಶಯಗಳಿಗೆ ಪೂರಕವಾಗಿ ಆಡಳಿತ ನಡೆಸುತ್ತೇನೆಂದು ವಾಗ್ದಾನ ಮಾಡಿದರು.

## ತಂದೆಯ ಕೋಟಾದಲ್ಲಿ ಪ್ರಿಯಾಂಕ-ಯತೀಂದ್ರಗೆ ಸ್ಥಾನ

• ಪ್ರಜೋದಯ ವರದಿ



**ಬೆಂಗಳೂರು :** ನಿರೀಕ್ಷೆಯಂತೆ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ ಖರ್ಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರು ಸ್ಥಾನ ಪಡೆದು ಕೊಂಡಿದ್ದಾರೆ.

ಪ್ರಿಯಾಂಕ ಖರ್ಗೆ ಅವರಿಗೆ ಸಂಪು ಟದಲ್ಲಿ ಸ್ಥಾನ ಸಿಗುವುದು ಖಚಿತವಾಗಿತ್ತು. ಸಿದ್ದರಾಮಯ್ಯ ಅವರು ಹೆಚ್ಚು ಷರತ್ತುಗಳಿಲ್ಲದೆ ಮಾತಿಗೆ ಬದ್ಧರಾಗಿ ಪದತ್ಯಾಗ ಮಾಡಿದ ಕಾರಣಕ್ಕಾಗಿ ಅವರ ಪುತ್ರ ಯತೀಂದ್ರ ಅವರಿಗೆ ಮಂತ್ರಿ ಮಂಡಲದಲ್ಲಿ ಅವಕಾಶ ನೀಡಲು ಹೈಕಮಾಂಡ್ ಒಪ್ಪಿಗೆ ಸೂಚಿಸಿತೆಂದು ತಿಳಿದು ಬಂದಿದೆ.

## ಡಿ.ಕೆ.ಶಿ.ಗೆ ಪ್ರಧಾನಿ ಮೋದಿ ಅಭಿನಂದನೆ

• ಪ್ರಜೋದಯ ವರದಿ



**ನವದೆಹಲಿ:** ಕರ್ನಾಟಕದ ಮುಖ್ಯ ಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆ ತಿಳಿಸಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆಗಳು. ಜನರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತದೆ ಎಂದು ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

## ಜಾರಕಿಹೊಳಿ ಕೈ ತಪ್ಪಿದ ಕೆಪಿಸಿಸಿ ಗಾದಿ

• ಪ್ರಜೋದಯ ವರದಿ



**ಬೆಂಗಳೂರು :** ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯ ಪ್ರಸ್ತಾವ ಬಂದಾಗಲೆಲ್ಲಾ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದಲ್ಲಿ ಬೆಳಗಾವಿ ಜಿಲ್ಲೆಯ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ ದೊರೆಯಲಿದೆ ಎಂಬ ನಿರೀಕ್ಷೆಗಳು ವ್ಯಕ್ತವಾಗುತ್ತಿದ್ದವು. ಆದರೆ, ಅದು ಈಗ ಹುಸಿಯಾಗಿದೆ.

ಕಾಂಗ್ರೆಸ್ ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಅವರ ಉತ್ತರಾಧಿಕಾರಿಯಾಗಿ ಸತೀಶ್ ಜಾರಕಿಹೊಳಿ ಅವರಿಗೆ ಆದ್ಯತೆ ನೀಡುವ ಆಶಯವನ್ನು ತೋಡಿಕೊಂಡಿತ್ತು. ಆದರೆ, ಸತೀಶ್ ಜಾರಕಿಹೊಳಿ ಅವರು ತಾವು ಪ್ರಸಕ್ತ ನಿರ್ವಹಿಸುತ್ತಿರುವ ಲೋಕೋಪಯೋಗಿ ಖಾತೆಯೊಂದಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಕಲ್ಪಿಸಬೇಕೆಂಬ ಬೇಡಿಕೆಯನ್ನು ಇಟ್ಟಿದ್ದರು.

ಎರಡು ಹುದ್ದೆಗಳನ್ನು ಒಬ್ಬರಿಗೆ ನೀಡುವ ನಿಲುವಿಗೆ ನಕಾರಾತ್ಮಕ ನಿರ್ಧಾರಕ್ಕೆ ಬಂದ ಕಾಂಗ್ರೆಸ್ ಹೈಕಮಾಂಡ್ ಸತೀಶ್ ಜಾರಕಿಹೊಳಿ ಅವರನ್ನು ಸಂಪುಟಕ್ಕೆ ತೆಗೆದುಕೊಂಡಿದ್ದು, ಕೆಪಿಸಿಸಿ ಅಧ್ಯಕ್ಷ ಪಟ್ಟ ಬಹುತೇಕ ಕೈ ತಪ್ಪಲಿದೆ ಎಂದು ಹೇಳಲಾಗುತ್ತಿದೆ.

## ನಾಲ್ವರಿಗಿಲ್ಲ ಡಿಸಿಎಂ ಹುದ್ದೆ

• ಪ್ರಜೋದಯ ವರದಿ

**ಬೆಂಗಳೂರು :** ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರಲ್ಲದೆ, ನಾಲ್ವರಿಗೆ ಉಪ ಮುಖ್ಯಮಂತ್ರಿ ಹುದ್ದೆಯನ್ನು ಕಾಂಗ್ರೆಸ್ ಹೈಕಮಾಂಡ್ ಕಲ್ಪಿಸಲಿದೆ ಎಂಬ ವರದಿಗಳಿದ್ದವು. ಆದರೆ, ಕೊನೆ ಘಳಿಗೆಯಲ್ಲಿ ಆ ಪ್ರಕ್ರಿಯೆ ಸಾಧ್ಯವಾಗಲಿಲ್ಲ.

ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ ಖರ್ಗೆ, ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ, ಜಿ. ಪರಮೇಶ್ವರ್ ಹಾಗು ಜಮೀರ್ ಅಹಮ್ಮದ್ ಖಾನ್ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ಲಭಿಸಲಿದೆ ಎಂಬ ಸುದ್ದಿ ಇತ್ತು. ಆದರೆ, ಡಿ.ಕೆ. ಶಿವಕುಮಾರ್ ಅವರ ಪ್ರತಿರೋಧಕ್ಕೆ ಹೈಕಮಾಂಡ್ ಮಾನ್ಯತೆ ನೀಡಿದ ಕಾರಣ ಅದು ಸಾಧ್ಯವಾಗಲಿಲ್ಲವೆಂದು ಗೊತ್ತಾಗಿದೆ.

ದಲಿತ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆಯೊಂದಿಗೆ ತಮಗೆ ಅವಕಾಶ ಕಲ್ಪಿಸಬೇಕೆಂದು ಜಿ.ಪರಮೇಶ್ವರ್ ಅವರು ಪಟ್ಟು ಹಿಡಿದ ಕಾರಣ ಹಾಗು ಸಿದ್ದರಾಮಯ್ಯ ಅವರು ಜಿ. ಪರಮೇಶ್ವರ್ ಅವರ ಪರವಾಗಿ ಲಾಬಿ ಮಾಡಿದ ಪರಿಣಾಮ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ಲಭ್ಯವಾಯಿತೆಂದು ಹೇಳಲಾಗುತ್ತಿದೆ.

## ಸಿದ್ದು ಸಂಪುಟದಲ್ಲಿದ್ದ 17 ಸಚಿವರಿಗಿಲ್ಲ ಮೊದಲ ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯದ ನೂತನ ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಅವರೊಂದಿಗೆ ನಿಕಟಪೂರ್ವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿದ್ದ 12 ಮಂದಿ ಸ್ಥಾನ ಪಡೆದರೆ, ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಕೂಡ ಸೇರ್ಪಡೆಯಾಗಿದ್ದಾರೆ. ಆದರೆ, ಹಿಂದಿನ ಮಂತ್ರಿ ಮಂಡಲದಲ್ಲಿದ್ದ 17 ಮಂದಿ ಹೊರಗುಳಿದಿದ್ದು, ಕೆಲವರಿಗೆ ಎರಡನೇ ಕಂತಿನಲ್ಲಿ ಸ್ಥಾನ ಸಿಗುವ ಸಾಧ್ಯತೆಗಳಿವೆ.

ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದ ಡಾ.ಹೆಚ್.ಸಿ. ಮಹದೇವಪ್ಪ, ಬೋಸರಾಜ್, ಕೆ. ವೆಂಕಟೇಶ್, ಜಮೀರ್ ಅಹಮ್ಮದ್ ಖಾನ್, ಆರ್.ಬಿ.ತಿಮ್ಮಾಪುರ, ಸಂತೋಷ್ ಲಾಡ್ ಅವರಿಗೂ ಮೊದಲ ಕಂತಿನಲ್ಲಿ ಅವಕಾಶ ಲಭ್ಯವಾಗಿಲ್ಲ.

ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಮಂಡ್ಯ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಮೈಸೂರು ಜಿಲ್ಲೆ ಯವರಾದ ಪಿರಿಯಾಪಟ್ಟಣ ಕ್ಷೇತ್ರದಿಂದ ಆರಿಸಿ ಬಂದಿರುವ ಪಶು ಸಂಗೋಪನಾ ಖಾತೆಯನ್ನು ಹೊಂದಿದ್ದ ಕೆ.ವೆಂಕಟೇಶ್ ಅವರಿಗೂ ಅವಕಾಶ ಸಿಕ್ಕಿಲ್ಲ.

ಬಹಳ ದಿನಗಳಿಂದಲೂ ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಅವರ ಅತ್ಯಾಪ್ತರಾಗಿದ್ದ ಹಿಂದಿನ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಖಾತೆಯನ್ನು ನಿರ್ವಹಣೆ ಮಾಡುತ್ತಿದ್ದ ಲಕ್ಷ್ಮಿ ಹೆಬ್ಬಾಳ್ಕರ್ ಕೂಡ ಸಂಪುಟದಿಂದ ಹೊರಗುಳಿದಿದ್ದಾರೆ. ಇನ್ನು ಸಣ್ಣ ನೀರಾವರಿ ಖಾತೆ ಹೊಂದಿದ್ದ ಬೋಸರಾಜ್, ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪುಟದಲ್ಲಿ ಪ್ರತಿನಿಧಿ ಸುತ್ತಿದ್ದ ಮಂಕಾಳ ವೈದ್ಯ, ಶಿಕ್ಷಣ ಖಾತೆಯನ್ನು ನಿಬಾಯಿಸುತ್ತಿದ್ದ ಮಧು ಬಂಗಾರಪ್ಪ, ಪೌರಾಡಳಿತ ಸಚಿವ ರಹೀಮ್ ಖಾನ್, ತೋಟಗಾರಿಕೆ ಮಂತ್ರಿ, ಎಸ್.ಮಲ್ಲಿಕಾರ್ಜುನ್, ಉನ್ನತ ಖಾತೆ ಶಿಕ್ಷಣ ಸಚಿವ ಡಾ.ಸುಧಾಕರ್, ಹಿಂದುಳಿದ ವರ್ಗಗಳ ಹಾಗು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಖಾತೆಯ ಹೊಣೆಗಾರಿಕೆ ಹೊತ್ತಿದ್ದ ಶಿವರಾಜ ತಂಗಡಗಿ, ಸಮಾಜ ಕಲ್ಯಾಣ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ, ಆರೋಗ್ಯ ಖಾತೆ ಸಚಿವರಾಗಿದ್ದ ದಿನೇಶ್ ಗುಂಡೂರಾವ್, ಅಬಕಾರಿ ಖಾತೆ ನೋಡಿಕೊಳ್ಳುತ್ತಿದ್ದ ಆರ್.ಬಿ.ತಿಮ್ಮಾಪುರ, ಕೃಷಿ ಮಾರುಕಟ್ಟೆ ಸಚಿವರಾಗಿದ್ದ ಶಿವಾನಂದ ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆಯನ್ನು ನಿಬಾಯಿಸುತ್ತಿದ್ದ ಹೆಚ್. ಕೆ.ಪಾಟೀಲ್, ಕಾರ್ಮಿಕ ಸಚಿವರಾಗಿದ್ದ ಸಂತೋಷ್ ಲಾಡ್ ಅವರಿಗೆ ಮೊದಲ ಕಂತಿನಲ್ಲಿ ಅವಕಾಶ ಲಭ್ಯವಾಗಿಲ್ಲ.



### ಸಂಪುಟದಿಂದ ಹೊರಗುಳಿದವರು

ಹೆಚ್.ಕೆ.ಪಾಟೀಲ್
ಚಲುವರಾಯ ಸ್ವಾಮಿ
ಕೆ.ವೆಂಕಟೇಶ್
ಬೋಸರಾಜ್
ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್
ಜಮೀರ್ ಅಹಮ್ಮದ್ ಖಾನ್
ಶಿವರಾಜ ತಂಗಡಗಿ
ಡಾ.ಹೆಚ್.ಸಿ.ಮಹದೇವಪ್ಪ
ಎಸ್.ಮಲ್ಲಿಕಾರ್ಜುನ್
ಡಾ.ಸುಧಾಕರ್
ದಿನೇಶ್ ಗುಂಡೂರಾವ್
ಆರ್.ಬಿ.ತಿಮ್ಮಾಪುರ
ಸಂತೋಷ್ ಲಾಡ್
ಮಂಕಾಳ ವೈದ್ಯ
ರಹೀಮ್ ಖಾನ್
ಮಧು ಬಂಗಾರಪ್ಪ
ಶಿವಾನಂದ ಪಾಟೀಲ್

## ಮಹಿಳೆಯರಿಗಿಲ್ಲ ಪ್ರಾತಿನಿಧ್ಯ

• ಪ್ರಜೋದಯ ವರದಿ

**ಬೆಂಗಳೂರು :** ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರೊಡನೆ 13 ಮಂದಿ ಮಂತ್ರಿಗಳು ಸಂಪುಟ ಸೇರಿದ್ದಾರೆ. ಆದರೆ, ಮೊದಲ ಕಂತಿನಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ದೊರೆತಿಲ್ಲ.

ಸಿದ್ದರಾಮಯ್ಯ ಅವರ ಮಂತ್ರಿಮಂಡಲದಲ್ಲಿ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಸ್ಥಾನ ಪಡೆದಿದ್ದರು. ಸರ್ಕಾರ ರಚನೆಗೂ ಮೊದಲು ಈ ಬಾರಿ ಲಕ್ಷ್ಮಿ ಹೆಬ್ಬಾಳ್ಕರ್ ಅವರೊಂದಿಗೆ ಸಚಿವ ಕೆ.ಹೆಚ್.ಮುನಿಯಪ್ಪ ಅವರ ಪುತ್ರಿ, ದಲಿತ ಸಮುದಾಯದ ರೂಪಕಲಾ ಶಶಿಧರ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಆದ್ಯತೆ ನೀಡಲಿದೆ ಎಂಬ ಅಭಿಪ್ರಾಯಗಳು ಇದ್ದವು. ಆದರೆ, ಮಹಿಳೆಯರಿಗೆ ಪ್ರಾತಿನಿಧ್ಯವೇ ಮೊದಲ ಕಂತಿನಲ್ಲಿ ದೊರೆತಿಲ್ಲ.

## ಜಮೀರ್‌ಗೆಕೈ ಕೊಟ್ಟ ಆಡಿಯೋ



• ಪ್ರಜೋದಯ ವರದಿ

**ಬೆಂಗಳೂರು :** ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಮಹತ್ವ ಜವಾಬ್ದಾರಿ ನಿರ್ವಹಿಸಿದ್ದಲ್ಲದೆ, ಅಲ್ಪ ಸಂಖ್ಯಾತ ಕೋಟಾದಡಿ ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಉಪಮುಖ್ಯಮಂತ್ರಿ ಹುದ್ದೆಯ ನಿರೀಕ್ಷೆಯಲ್ಲಿದ್ದ ಜಮೀರ್ ಅಹಮ್ಮದ್ ಖಾನ್ ಅವರಿಗೆ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಹೊರ ಬಿದ್ದ ಆಡಿಯೋ ಮುಳುವಾಗಿದ್ದು ಖಚಿತವಾಗಿದೆ.

ದಾವಣಗೆರೆ ಉಪ ಚುನಾವಣೆ ಸಂದರ್ಭದಲ್ಲಿ ಅಲ್ಪ ಸಂಖ್ಯಾತರಿಗೆ ಸ್ಪರ್ಧೆಯ ಅವಕಾಶ ನೀಡಲಿಲ್ಲವೆಂಬ ಕಾರಣಕ್ಕೆ ಮುನಿದ ಜಮೀರ್ ಅಹಮ್ಮದ್ ಅವರು ಆ ಕ್ಷೇತ್ರದ ತಮ್ಮ ಬೆಂಬಲಿಗರಿಗೆ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಬಿಜೆಪಿ ಅಥವಾ ಎಸ್‌ಡಿಪಿಐಗೆ ಮತ ನೀಡುವಂತೆ ಕಾಂಗ್ರೆಸ್ ಪ್ರಮುಖರೊಬ್ಬರೊಂದಿಗೆ ತಾಕೀತು ಮಾಡಿದ ಸಂಭಾಷಣೆಯ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದರಿಂದ ಮೊದಲ ಕಂತಿನಲ್ಲಿ ಜಮೀರ್ ಅವರಿಗೆ ಸಂಪುಟ ಸೇರುವ ಅವಕಾಶ ಕೈ ತಪ್ಪಿತೆನ್ನಲಾಗಿದೆ.

ಜಮೀರ್ ಅಹಮ್ಮದ್ ಅವರನ್ನು ಸಂಪುಟಕ್ಕೆ ತೆಗೆದುಕೊಳ್ಳದಿದ್ದರೆ ಅಲ್ಪ ಸಂಖ್ಯಾತರು ಕಾಂಗ್ರೆಸ್ ವಿರುದ್ಧ ಅಸಮಾಧಾನಗೊಳ್ಳಬಹುದೆಂಬ ಕಾರಣಕ್ಕೆ ಕಾಂಗ್ರೆಸ್ ಹೈಕಮಾಂಡ್ ಮೊದಲ ಕಂತಿನಲ್ಲಿ ಯು.ಟಿ.ಖಾದರ್ ಅವರಿಗೆ ನೀಡಿದೆ ಎಂದು ಹೇಳಲಾಗುತ್ತಿದೆ.

## ಡಿ.ಕೆ.ಶಿ.ಗೆ ಸಿದ್ದರಾಮಯ್ಯ ಶುಭಾಶಯ



• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭಾಶಯಗಳನ್ನು ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ, ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂಗಾತಿ ಡಿ.ಕೆ. ಶಿವಕುಮಾರ್ ಅವರಿಗೂ ಹಾಗೂ ಎಲ್ಲಾ ನೂತನ ಸಚಿವರುಗಳಿಗೂ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಡಿಕೆಶಿ ನೂತನ ಸಂಪುಟದಲ್ಲಿ ಸಚಿವರಾದವರು




**2ನೇ ಬಾರಿಗೆ ಡಿಸಿಎಂ ಆದ ಪರಮೇಶ್ವರ್**

ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಡಾ.ಜಿ.ಪರಮೇಶ್ವರ್ ಅವರು ಇದೀಗ ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಒಟ್ಟು 5 ಬಾರಿ ಶಾಸಕರಾಗಿ ಆಯ್ಕೆ ಆಗಿರುವ ಡಾ.ಜಿ.ಪರಮೇಶ್ವರ್ ಅವರು 1989ರಲ್ಲಿ ಮಧುಗಿರಿಯಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದ್ದರು. 1993ರಲ್ಲಿ ಮೊಯ್ಲಿ ಸಂಪುಟದಲ್ಲಿ ರೇಷ್ಮೆ ಇಲಾಖೆ ಸಚಿವರಾಗಿದ್ದರು. 1999 ಮತ್ತು 2004ರಲ್ಲಿ ಮಧುಗಿರಿಯಲ್ಲಿ ಮತ್ತೆ ಗೆಲುವು ದಾಖಲಿಸಿದ್ದರು. 2008ರಲ್ಲಿ ಕ್ಷೇತ್ರ ಬದಲಾಯಿಸಿ ಕೊರಟಗೆರೆಯಿಂದ ಸ್ಪರ್ಧಿಸಿದ್ದರು. 2010 ರಿಂದ 2018ರ ವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಪರಮೇಶ್ವರ್, ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಡಿಸಿಎಂ ಆಗಿದ್ದರು. ಗೃಹ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ವಿಜ್ಞಾನ ತಂತ್ರಜ್ಞಾನ ಸಚಿವರಾಗಿ, ಬೆಂಗಳೂರು ಅಭಿವೃದ್ಧಿ ಸಚಿವರಾಗಿಯೂ ಪರಮೇಶ್ವರ್ ಅವರು ಸೇವೆ ಸಲ್ಲಿಸಿದ್ದಾರೆ.

**7 ಬಾರಿ ಸಂಸದರಾಗಿದ್ದ ಕೆ.ಹೆಚ್.ಮುನಿಯಪ್ಪ**

ಹಿರಿಯ ಮತ್ತು ಪ್ರಭಾವಿ ದಲಿತ ನಾಯಕರಲ್ಲಿ ಒಬ್ಬರಾಗಿರುವ ಕೆ.ಹೆಚ್.ಮುನಿಯಪ್ಪ ಅವರು 1991 ರಿಂದ 2019ರ ವರೆಗೆ ಕೋಲಾರ ಲೋಕಸಭಾ ಕ್ಷೇತ್ರದಿಂದ ಸತತವಾಗಿ ಏಳು ಬಾರಿ ಸಂಸದರಾಗಿ ಆಯ್ಕೆಯಾದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಎಸ್.ಮುನಿಸ್ವಾಮಿ ಅವರ ವಿರುದ್ಧ ಮೊದಲ ಬಾರಿಗೆ ಪರಾಭವಗೊಂಡು, 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಕಳೆದ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಆಹಾರ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

**3ನೇ ಬಾರಿ ಸಚಿವರಾದ ಎಂ.ಬಿ.ಪಾಟೀಲ್**

ಲಿಂಗಾಯಿತ ಸಮುದಾಯದ ಪ್ರಭಾವಿ ನಾಯಕರಾಗಿರುವ ಎಂ.ಬಿ.ಪಾಟೀಲ್ ಅವರು ಬಬಲೇಶ್ವರ ಕ್ಷೇತ್ರದ ಶಾಸಕರು. ಐದು ಬಾರಿ ಶಾಸಕರಾಗಿ ಆಯ್ಕೆ ಆಗಿರುವ ಅವರು, ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದು 1991ರಲ್ಲಿ. 1998ರಲ್ಲಿ ವಿಜಯಪುರ ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು, 2013ರಲ್ಲಿ ಸಿದ್ದರಾಮಯ್ಯ ಸಂಪುಟದಲ್ಲಿ ಜಲ ಸಂಪನ್ಮೂಲ ಸಚಿವರಾಗಿ, 2018ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಸಂಪುಟದಲ್ಲಿ ಗೃಹ ಸಚಿವರಾಗಿ ಮತ್ತು 2023-26ರವರೆಗೆ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಬೃಹತ್ ಕೈಗಾರಿಕಾ ಸಚಿವರಾಗಿದ್ದರು.

**ಕಾಂಗ್ರೆಸ್‌ನ ಹಿರಿಯ ನಾಯಕ ಕೆ.ಜೆ.ಜಾರ್ಜ್**

ಸರ್ವಜ್ಞ ನಗರ ಕ್ಷೇತ್ರದ ಶಾಸಕರಾಗಿರುವ ಕೆ.ಜೆ.ಜಾರ್ಜ್ ಕರ್ನಾಟಕ ಕಾಂಗ್ರೆಸ್‌ನ ಹಿರಿಯ ನಾಯಕರಲ್ಲಿ ಒಬ್ಬರು. ಆರು ಬಾರಿ ಶಾಸಕರಾಗಿ ಆಯ್ಕೆ ಆಗಿರುವ ಅವರು, 1985ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ವಿಧಾನಸಭೆ ಪ್ರವೇಶ ಮಾಡಿದ್ದರು. ವೀರೇಂದ್ರ ಪಾಟೀಲ್, ಎಸ್.ಬಂಗಾರಪ್ಪ ಸರ್ಕಾರದಲ್ಲೂ ಸಂಪುಟ ದರ್ಜೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ಸಂಪುಟದಲ್ಲಿ ಗೃಹ ಸಚಿವರಾಗಿದ್ದರು. 2018ರಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ಬೃಹತ್ ಮಧ್ಯಮ ಕೈಗಾರಿಕೆ ಸಚಿವರಾಗಿದ್ದ ಇವರು 2023ರಲ್ಲಿ ಸಿದ್ದರಾಮಯ್ಯ ಸಂಪುಟದಲ್ಲಿ ಇಂಧನ ಖಾತೆ ನಿರ್ವಹಣೆ ಮಾಡಿದ್ದರು.

**5 ಬಾರಿ ಶಾಸಕರಾಗಿರುವ ಯು.ಟಿ.ಖಾದರ್**

ಯು.ಟಿ.ಖಾದರ್ ಅವರು ಈವರೆಗೆ 5 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2007ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದ್ದು, 2013ರಲ್ಲಿ ಆರೋಗ್ಯ ಕುಟುಂಬ ಕಲ್ಯಾಣ ಸಚಿವರಾಗಿದ್ದರು. 2016ರಲ್ಲಿ ಆಹಾರ, ನಾಗರಿಕ ಪೂರೈಕೆ ಖಾತೆ ನಿರ್ವಹಣೆ ಮಾಡಿ ದ್ದರು. 2018ರಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಖಾತೆ ನಿಭಾಯಿಸಿದ್ದರು. ಚಾಮರಾಜನಗರ, ಕೋಲಾರ ಸೇರಿ ವಿವಿಧ ಜಿಲ್ಲೆಗಳ ಉಸ್ತುವಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. 2022ರಲ್ಲಿ ವಿಧಾನಸಭೆ ಪ್ರತಿಪಕ್ಷ ಉಪನಾಯಕರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಅವಧಿ ಯಲ್ಲಿ ವಿಧಾನಸಭೆ ಸ್ಪೀಕರ್ ಕಾರ್ಯನಿರ್ವಹಿಸಿದ್ದರು.

**ಪ್ರಿಯಾಂಕ್ ಖರ್ಗೆ ಮೂರು ಬಾರಿ ಶಾಸಕ**

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರು, ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2013ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ವಿಧಾನಸಭೆ ಪ್ರವೇಶ ಮಾಡಿದ್ದರು. 2016ರಲ್ಲಿ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿ ಪದಾರ್ಪಣೆ ಮಾಡುವ ಮೂಲಕ ಐಟಿ, ಬಿಟಿ ಮತ್ತು ಪ್ರವಾಸೋದ್ಯಮ ಸಚಿವರಾಗಿ ಪ್ರಿಯಾಂಕ್ ಸೇವೆ ಸಲ್ಲಿಸಿದ್ದರು. ಇನ್ನೂ 2018ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಎರಡನೇ ಬಾರಿಗೆ ಗೆದ್ದು ಬೀಗಿದ್ದ ಅವರು, ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿ ಸಮಾಜ ಕಲ್ಯಾಣ ಇಲಾಖೆ ನಿರ್ವಹಿಸಿ ದ್ದರು. 2023ರಲ್ಲಿ ಚಿತ್ತಾಪುರ ಕ್ಷೇತ್ರದಿಂದ 3ನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ, ಸಿದ್ದರಾಮಯ್ಯ ಸಂಪುಟದಲ್ಲಿ ಐಟಿ-ಬಿಟಿ ಸಚಿವರಾಗಿದ್ದ ಪ್ರಿಯಾಂಕ್, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಗಳನ್ನು ನಿರ್ವಹಣೆ ಮಾಡಿದ್ದಾರೆ.

**3ನೇ ಬಾರಿಗೆ ಸಚಿವರಾದ ಈಶ್ವರ್ ಖಂಡ್ರೆ**

ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದ ಶಾಸಕ ಈಶ್ವರ ಖಂಡ್ರೆ ಅವರು ಈ ವರೆಗೆ ನಾಲ್ಕು ಬಾರಿ ಗೆಲುವು ಸಾಧಿಸಿದ್ದಾರೆ. 2013ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರಾಗಿದ್ದರು. ಬಳಿಕ 2023ರ ಮತ್ತೊಮ್ಮೆ ಸಿದ್ದರಾಮಯ್ಯ ಸಂಪುಟದಲ್ಲಿ ಅರಣ್ಯ ಸಚಿವರಾಗಿದ್ದರು. ಇದೀಗ ಡಿ.ಕೆ. ಶಿವಕುಮಾರ್ ಸಂಪುಟದಲ್ಲೂ ಸಹ ಕ್ಯಾಬಿನೆಟ್ ಸಚಿವರಾಗಿದ್ದಾರೆ. ಈ ಹಿಂದೆ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದರು. ಇದೀಗ ಅವರು ರಾಷ್ಟ್ರೀಯ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾಗಿದ್ದಾರೆ.

**ಹಿರಿಯ ನಾಯಕ ರಾಮಲಿಂಗಾ ರೆಡ್ಡಿಗೆ ಮತ್ತೆ ಮಣೆ**

ಬೆಂಗಳೂರಿನಲ್ಲಿಯೇ ಐದು ದಶಕದಿಂದಲೂ ರಾಜಕೀಯದಲ್ಲಿರುವ ರಾಮಲಿಂಗಾರೆಡ್ಡಿ ಅವರು ಕಾಂಗ್ರೆಸ್‌ನ ಹಿರಿಯ ನಾಯಕ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಎಲ್ಲಾ ಸಂಪುಟಗಳಲ್ಲಿ ಸಚಿವರಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

1983ರಲ್ಲಿ ಬೆಂಗಳೂರು ನಗರ ಪಾಲಿಕೆ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ರಾಮಲಿಂಗಾರೆಡ್ಡಿ ಅವರು 1989ರಲ್ಲಿ ಜಯನಗರ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದರು. ಜಯನಗರದಿಂದ ನಾಲ್ಕು ಬಾರಿ ಆಯ್ಕೆಯಾದ ಅವರು 2008ರಲ್ಲಿ ರಚನೆಯಾದ ಬಿಟಿಎಂ ಲೇಔಟ್ ಕ್ಷೇತ್ರದಿಂದ ನಿರಂತರವಾಗಿ ಆಯ್ಕೆಯಾಗುತ್ತಿದ್ದಾರೆ. ಪ್ರಮುಖ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದ ಹಿರಿಮೆ ಅವರದ್ದು. ವೀರಪ್ಪ ಮೊಯ್ಲಿ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಪ್ರಭಾವ ಸಚಿವರಾಗಿದ್ದವರು. ಇದುವರೆಗೂ ಒಟ್ಟು 8 ಬಾರಿ ಶಾಸಕರಾಗಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದಾರೆ. ರಾಮಲಿಂಗಾ ರೆಡ್ಡಿ ಅವರ ಪುತ್ರಿ, ಸೌಮ್ಯರೆಡ್ಡಿ ಜಯನಗರ ಕ್ಷೇತ್ರದ ಶಾಸಕರಾಗಿದ್ದರು.

**ಶರಣ ಪ್ರಕಾಶ್‌ಗೆ ಮತ್ತೆ ಒಲಿದ ಗಾದಿ**

ಡಾ.ಶರಣಪ್ರಕಾಶ ಆರ್.ಪಾಟೀಲ ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ಒಲಿದು ಬಂದಿದೆ. ಎಂಬಿಬಿಎಸ್ ಓದಿರುವ ಡಾ. ಶರಣಪ್ರಕಾಶ ಅವರು ಡರ್ಮಾಟಾಲಜಿಯಲ್ಲಿ ಎಂಡಿ ಸ್ನಾತಕೋತ್ತರ ಪದವಿ ಮುಗಿಸಿದ್ದಾರೆ. ಸೇಡಂ ತಾಲ್ಲೂಕಿನ ಮಳಖೇಡದಿಂದ ಜಿಲ್ಲಾ ಪಂಚಾಯಿತಿ ಪ್ರವೇಶಿಸಿದ ಅವರು, ಮೊದಲ ಗೆಲುವಿನಲ್ಲೇ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ಪಟ್ಟ ಅಲಂಕರಿ ಸಿದ್ದರು. 2004ರಲ್ಲಿ ಸೇಡಂ ವಿಧಾನಸಭಾ ಮತಕ್ಷೇತ್ರದಿಂದ ಮೊದಲ ಬಾರಿ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದರು. 2008, 2013 ಹಾಗು 2023ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2013ರಲ್ಲಿ ಡಾ.ಶರಣಪ್ರಕಾಶ ಪಾಟೀಲರು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಬಳಿಕ 2018ರ ವಿಧಾನಸಭಾ ಚುನಾವಣೆಯಲ್ಲಿ ಅವರು ಸೋತಿದ್ದರು. 2023ರಲ್ಲಿ ಮತ್ತೆ ಶಾಸಕರಾಗಿ ಆಯ್ಕೆಯಾದರು. ಸಹಜವಾಗಿಯೇ ಮತ್ತೆ ಸಚಿವ ಸ್ಥಾನ ಒಲಿದಿತ್ತು. ಅವರು ಸಿದ್ದರಾಮಯ್ಯ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ, ಜೀವನೋಪಾಯ ಖಾತೆ ಸಚಿವರಾಗಿ ಕೆಲಸ ಮಾಡಿ ದ್ದರು. ಇದೀಗ ಡಿ.ಕೆ. ಶಿವಕುಮಾರ್ ಸಚಿವ ಸಂಪುಟದಲ್ಲೂ ಮೊದಲ ಸುತ್ತಿನಲ್ಲೇ ಅವರು ಸಚಿವರಾಗಿದ್ದಾರೆ.

**ಬೈರತಿ ಸುರೇಶ್‌ಗೆ ಮತ್ತೆ ಒಲಿದ ಸಚಿವ ಸ್ಥಾನ**

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೆರಳಿನ ರೀತಿಯಲ್ಲಿಯೇ ರಾಜಕೀಯವಾಗಿ ಬೆಳೆದು ಬಂದವರು ಬೈರತಿ ಸುರೇಶ್ ಸತತ ಎರಡನೇ ಬಾರಿಗೆ ಸಚಿವರಾಗುತ್ತಿದ್ದಾರೆ.

2012ರಲ್ಲಿ ವಿಧಾನಪರಿಷತ್ ಸದಸ್ಯರಾಗಿದ್ದ ಸುರೇಶ್ ಅವರು 2018ರಲ್ಲಿ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು ಜಯಶಾಲಿಯಾದರು. 2023ರ ಚುನಾವಣೆಯಲ್ಲೂ ಸ್ಪರ್ಧಿಸಿ 2ನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ಎರಡು ಬಾರಿಯೂ ಹೆಚ್ಚಿನ ಅಂತರದಿಂದಲೇ ಅವರು ಚುನಾಯಿತರಾಗಿದ್ದಾರೆ. ಪತ್ನಿ ಪದ್ಮಾವತಿ ಅವರು ಹೊಸ ಕೋಟೆ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋತಿದ್ದರು.

**ಯತೀಂದ್ರ ಸಿದ್ದರಾಮಯ್ಯಗೆ ಸ್ಥಾನ**

ತಂದೆ ಸಿದ್ದರಾಮಯ್ಯ ಅವರು ರಾಜಕೀಯದಲ್ಲಿ ಸಕ್ರಿಯವಾಗಿ, ಹಲವು ಅಧಿಕಾರಿಗಳನ್ನು ಅನುಭವಿಸಿ ಉತ್ತುಂಗದಲ್ಲಿದ್ದರೂ ವೈದ್ಯನಾಗಿ ತಮ್ಮ ಪಾಡಿಗೆ ತಮ್ಮ ಕೆಲಸದಲ್ಲಿ ತೊಡಗಿದ್ದವರು ಡಾ.ಯತೀಂದ್ರ ಸಿದ್ದರಾಮಯ್ಯ ಅವರು, ಅಣ್ಣ ರಾಕೇಶ್ ಸಿದ್ದರಾಮಯ್ಯ ಅವರ ಅಕಾಲಿಕ ನಿಧನದ ನಂತರ ಅಪ್ಪನಿಗೆ ನೆರವಾಗಲೆಂದು ರಾಜಕೀಯಕ್ಕೆ ಧುಮುಕಿದ ಅವರು ಬಳಿಕ ರಾಜಕಾರಣದಲ್ಲಿ ಸಕ್ರಿಯವಾಗಿದ್ದಾರೆ. ಮೊದಲ ಪ್ರಯತ್ನದಲ್ಲೇ ವಿಧಾನಸಭೆ ಪ್ರವೇಶಿಸಿದ್ದರು.

ಮೈಸೂರಿನ ವರುಣ ವಿಧಾನಸಭಾ ಕ್ಷೇತ್ರದಿಂದ ಒಮ್ಮೆ ಶಾಸಕರಾಗಿದ್ದ ಅವರು, ಹಾಲಿ ವಿಧಾನಪರಿಷತ್ ಸದಸ್ಯರಾಗಿದ್ದಾರೆ. 2018ರ ಚುನಾವಣೆಯಲ್ಲಿ ಕ್ಷೇತ್ರವನ್ನು ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಬಿಟ್ಟು ಕೊಟ್ಟು ಚಾಮುಂಡೇಶ್ವರಿ ಹಾಗು ಬಾಗಲಕೋಟೆ ಜಿಲ್ಲೆಯ ಬಾದಾಮಿಯಿಂದ ಕಣಕ್ಕಿಳಿದಿದ್ದರು. ಚಾಮುಂಡೇಶ್ವರಿಯಲ್ಲಿ ಗೆಲುವು ಸಿಗಲಿಲ್ಲ. ಬಾದಾಮಿ ಜನರು ಸಿದ್ದರಾಮಯ್ಯ ಅವರ ಕೈಹಿಡಿದರು. 2018ರಲ್ಲಿ ಡಾ.ಯತೀಂದ್ರ ಅವರು ಮೊದಲ ಪ್ರಯತ್ನದಲ್ಲೇ ಬಿಜೆಪಿಯ ತೋಟದಪ್ಪ ಬಸವರಾಜು ಅವರನ್ನು ಸೋಲಿಸಿದ್ದರು. 2023ರ ಚುನಾವಣೆಯಲ್ಲಿ ಯತೀಂದ್ರ ಅವರು ತಂದೆಗೆ ಕ್ಷೇತ್ರ ಬಿಟ್ಟುಕೊಟ್ಟು, ಅವರ ಪರವಾಗಿ ಪ್ರಚಾರ ಮಾಡಿದರು. ಸಿದ್ದರಾಮಯ್ಯ ಅವರು ಗೆಲುವು ಸಾಧಿಸಿ 2ನೇ ಬಾರಿಗೆ ಮುಖ್ಯ ಮಂತ್ರಿಯೂ ಆದರು. ಮಗ ಕ್ಷೇತ್ರದಲ್ಲಿ ಸಂಚರಿಸಲು ಅನುಕೂಲ ಆಗಲೆಂದು, ಸಿದ್ದರಾಮಯ್ಯ ಅವರು ಯತೀಂದ್ರ ಅವರನ್ನು ವರುಣ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಹಾಗೂ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಸದಸ್ಯರನ್ನಾಗಿಸಿ ಅವರಿಗೆ ಅಧಿಕಾರ ಸಿಗುವಂತೆ ನೋಡಿಕೊಂಡಿದ್ದರು. ಯತೀಂದ್ರ ಅವರನ್ನು ವಿಧಾನಸಭೆಯಿಂದ ನಡೆದ ಚುನಾವಣೆಯಲ್ಲಿ ಮೇಲ್ಮನೆಗೆ (ವಿಧಾನಪರಿಷತ್) ಕಳುಹಿಸುವಲ್ಲಿ ಯಶಸ್ವಿಯಾಗಿದ್ದು, ಈಗ ಮಂತ್ರಿ ಸ್ಥಾನವೂ ಒಲಿದಿದೆ.

**5ನೇ ಬಾರಿಕೆ ಸಚಿವರಾದ ಸತೀಶ್ ಜಾರಕಿಹೊಳಿ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಸತೀಶ್ ಜಾರಕಿಹೊಳಿ ನಿರೀಕ್ಷೆ ಯಂತೆ ಸ್ಥಾನ ಪಡೆದಿದ್ದಾರೆ. ಆರು ಬಾರಿ ಶಾಸಕರಾಗಿರುವ (2 ಬಾರಿ ವಿಧಾನ ಪರಿಷತ್ ಸದಸ್ಯ) ಅವರು ಐದನೇ ಸಲ ಸಚಿವರಾಗಿದ್ದಾರೆ.

ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಲೋಕೋಪಯೋಗಿ ಇಲಾಖೆಯ ಜವಾಬ್ದಾರಿ ನಿಭಾಯಿಸಿದ್ದ ಅವರಿಗೆ ಈಗ ಕಾಂಗ್ರೆಸ್ ಸರ್ಕಾರದ ಮೊದಲ ಪಟ್ಟಿಯಲ್ಲೇ ಸತೀಶ್ ಜಾರಕಿಹೊಳಿ ಸಂಪುಟ ದರ್ಜೆ ಸಚಿವರಾಗಿದ್ದಾರೆ. ಜೆಡಿಎಸ್ ಪಕ್ಷದಲ್ಲಿದ್ದಾಗ 1998ರಲ್ಲಿ ಸ್ಥಳೀಯ ಸಂಸ್ಥೆಗಳಿಂದ ಸತೀಶ ಜಾರಕಿಹೊಳಿ ವಿಧಾನ ಪರಿಷತ್ ಪ್ರವೇಶಿಸಿದ್ದರು. 2004ರಲ್ಲಿ ಪುನರಾಯ್ಕೆಯಾದರು. 2006ರಲ್ಲಿ ಸಿದ್ದರಾಮಯ್ಯ ಅವರ ಜೊತೆ ಕಾಂಗ್ರೆಸ್ ಸೇರಿದರು. ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಜವಳಿ ಖಾತೆ ಸಚಿವರಾದರು. 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ, ಸಿದ್ದರಾಮಯ್ಯ ಸಂಪುಟದಲ್ಲಿ ಅಬಕಾರಿ ಮತ್ತು ಸಣ್ಣ ಕೈಗಾರಿಕೆ ಸಚಿವರಾಗಿದ್ದರು. 2018-19ರಲ್ಲಿ ಕಾಂಗ್ರೆಸ್‌ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲೂ ಅರಣ್ಯ ಮತ್ತು ಪರಿಸರ ಖಾತೆ ನಿರ್ವಹಿಸಿದ್ದರು.

2013ರ ಚುನಾವಣೆಯಲ್ಲಿ ಕ್ಷೇತ್ರಕ್ಕೆ ಪ್ರಚಾರಕ್ಕೆ ಹೋಗದೆಯೇ ಬಿಜೆಪಿಯ ಮಾರುತಿ ಅಷ್ಟಗಿ ವಿರುದ್ಧ 2,850 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದ ಸತೀಶ್, ಕಳೆದ ಬಾರಿ ಬಿಜೆಪಿ ಅಭ್ಯರ್ಥಿ ಬಸವರಾಜ ಹುಂದ್ರಿ ವಿರುದ್ಧ 57,211 ಮತಗಳ ಅಂತರದಿಂದ ಗೆದ್ದು ಬೀಗಿದ್ದರು.

**ಕೃಷ್ಣ ಬೈರೇಗೌಡ ಮತ್ತೆ ಒಲಿದ ಸ್ಥಾನ**

ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಕೃಷ್ಣ ಬೈರೇಗೌಡ ಅವರು ಡಿ.ಕೆ.ಶಿವಕುಮಾರ್ ಅವರ ಸಂಪುಟದ ಮೊದಲ ಪಟ್ಟಿಯಲ್ಲೇ ಸ್ಥಾನ ಪಡೆದುಕೊಂಡಿದ್ದಾರೆ. ಬೆಂಗಳೂರಿನ ಬ್ಯಾಟರಾಯನಪುರ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿದ್ದಾರೆ. 30ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ಶಾಸಕರಾದ ಅವರು, ಕೃಷಿ, ಗ್ರಾಮೀಣಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಜೊತೆಗೆ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

---

# ಆತ್ಮವಿಶ್ವಾಸದ ಆಸರೆ ಸಿಕ್ಕರೆ, ಅವಳು ಭೂಮಿಯನ್ನೇ ಸ್ವರ್ಗ ಮಾಡಬಲ್ಲಳು.

ಪ್ರತಿಯೊಬ್ಬರಿಗೂ ಬದುಕಿನಲ್ಲಿ ವಿಶೇಷ ಸಂಭ್ರಮದ ಸಂದರ್ಭವೆಂದರೆ ಮದುವೆ. ಮದುವೆ ಎಂಬುದು ಕೇವಲ ಮೂರಕ್ಷರಗಳ ಪದವಲ್ಲ, ಅದು ಈ ಸೃಷ್ಟಿಯ ಪ್ರಾರಂಭದಿಂದ ಇಂದಿನವರೆಗೂ ನಡೆದುಕೊಂಡು ಬಂದಿರುವ ವಿಶಿಷ್ಟ, ವಿಭಿನ್ನ ಮತ್ತು ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಸ್ಕಾರವಾಗಿದೆ ಅಂತ ನಾನು ಹೀಗೆ ಮದುವೆ ಮನೆಯ ಚಪ್ಪರದ ಕೆಳಗೆ ನಿಂತು ನನ್ನೊಳಗೆ ನಾನೇ ಹೇಳಿಕೊಳ್ಳುತ್ತಿದ್ದೆ. ಆಗಲೇ ಮನೆಯೆಲ್ಲಾ ಹೂವಿನ ಸುಗಂಧದ ಪರಿಮಳ, ಅಗರಬತ್ತಿಯ ಧೂಪ ಹರಡಿತ್ತು. ಮನೆಯು ಜನರ ಓಡಾಟದ ಸದ್ದಿನಿಂದ ತುಂಬಿತ್ತು. ಆದರೆ ಇವೆಲ್ಲದರ ನಡುವೆ ಕನ್ನಡಿಯ ಮುಂದೆ ಕುಳಿತಿದ್ದ ಮದುಮಗಳು ಕಾಂತ ಮಾತ್ರ ಬೇರೆಯದೇ ಲೋಕದಲ್ಲಿದ್ದಳು. ಅವಳ ಕೈಮೇಲಿನ ಮೆಹಂದಿ ಗಾಢವಾಗಿ ಕೆಂಪಾಗಿತ್ತು. ಕಾಂತಾಳ ಗೆಳತಿ ಲಕ್ಷ್ಮಿ ಕೋಣೆಗೆ ಬರುತ್ತಾ ಕೇಳಿದಳು, ಏನ್ ಕಾಂತಾ, ಇನ್ನು ತಯಾರಾಗಿಲ್ವಾ? ಮುಹೂರ್ತಕ್ಕೆ ಇನ್ನು ಎರಡೇ ಗಂಟೆ ಬಾಕಿ ಇದೆ. ಇಷ್ಟು ಸೈಲೆಂಟ್ ಆಗಿಬಿಟ್ಟಿದ್ದೀಯಲ್ಲ? ಎಂದಳು. ಕಾಂತಾ ಕನ್ನಡಿಯಲ್ಲೇ ಲಕ್ಷ್ಮಿಯನ್ನು ನೋಡುತ್ತಾ ಮೆಲ್ಲಗೆ ನಕ್ಕಳು. ಸೈಲೆಂಟ್ ಆಗಿಲ್ಲ ಲಕ್ಷ್ಮಿ, ಒಳಗಡೆ ಏನೋ ಒಂದು ರೀತಿಯ ಚಂಡಮಾರುತ ಶುರುವಾಗಿದೆ ಅಷ್ಟೇ. ಅಷ್ಟರಲ್ಲಿ ಕಾಂತಾಳ ತಾಯಿ ಚಂದ್ರಮ್ಮ ರೇಷ್ಮೆ ಸೀರೆಯ ನೆರಿಗೆ ಸರಿಪಡಿಸಿಕೊಳ್ಳುತ್ತಾ ಒಳಗೆ ಬಂದರು. ಮಗಳ ಮೌನ ಕಂಡು ಅವರೂ ಒಂದು ಕ್ಷಣ ಭಾವುಕರಾದ. ಚಂದ್ರಮ್ಮ ಕೇಳಿದರು ಯಾಕೆ ಕಂದಾ, ಕಣ್ಣು ತುಂಬಿ ಬಂದಿದೆ? ಏನಾದರೂ ಗಾಬರಿ ಆಗ್ತಿದೆಯಾ? ಕಾಂತಾ ಕೇಳಿದಳು, ಅಮ್ಮ... ಈ ಮನೆಯ ಪ್ರತಿ ಮೂಲೆಯಲ್ಲೂ ನನ್ನ ಅಸ್ತಿತ್ವ ಇದೆ. ನಾಳೆ ಬೆಳಿಗ್ಗೆ ನಾನು ಇಲ್ಲಿಂದ ಹೊರಟಾಗ, ಈ ಗೋಡೆಗಳು ನನ್ನನ್ನು ನೆನಪಿಸಿಕೊಳ್ಳುತ್ತವಾ? ಅಥವಾ ನಾಳೆಯಿಂದಲೇ ನಾನು ಇಲ್ಲಿ ಅತಿಥಿ ಆಗಿಬಿಡ್ತೀನಾ? ಚಂದ್ರಮ್ಮ ಮಗಳ ಪಕ್ಕ ಕುಳಿತು ಅವಳ ಕೈ ಹಿಡಿದರು. ನೋಡು ಕಾಂತಾ, ಹೆಣ್ಣು ಅಂದ್ರೆ, ಹರಿಯುವ ನದಿ ಇದ್ದ ಹಾಗೆ. ಒಂದು ದಡ ಬಿಟ್ಟರೆ ಮಾತ್ರ ಇನ್ನೊಂದು ದಡ ಸೇರೋದಕ್ಕೆ ಸಾಧ್ಯ. ನದಿ ಸಮುದ್ರ ಸೇರಿದ ತಕ್ಷಣ ತನ್ನ ಅಸ್ತಿತ್ವ ಕಳೆದುಕೊಳ್ಳಲ್ಲ, ಬದಲಿಗೆ ವಿಶಾಲವಾಗುತ್ತೆ ಕಾಣಮ್ಮ. ಗಾಬರಿಯಾಗ್ಬೇಡ ಸಮಾಧಾನಿಯಾಗು ಕಂದಾ. ಅಂತ ಸಮಾಧಾನ ಮಾಡಿದರು. ಕೂಡಲೇ ಕಾಂತಾ; ಆದ್ರೆ ಅಮ್ಮ, ಅಲ್ಲಿ ನನ್ನನ್ನು ಅರ್ಥ ಮಾಡಿಕೊಳ್ಳುವವರು ಸಿಕ್ತಾರಾ? ನಿನ್ನ ಹಾಗೆ ನನ್ನ ಮುನಿಸನ್ನು ಯಾರು ಸಹಿಸಿಕೊಳ್ಳುತ್ತಾರೆ? ಅಪ್ಪನಿಗೆ ಮಧ್ಯಾಹ್ನ ನಾನು ಕಾಫಿ ಕೊಡದಿದ್ದರೆ ಅವರಿಗೆ ಸಮಾಧಾನವಾಗಲ್ಲ, ನಾಳೆಯಿಂದ ಅವರ ಗತಿ ಏನು? ಎಂದೆಲ್ಲಾ ಅಮ್ಮನನ್ನು ಪ್ರಶ್ನಿಸಿದಳು.

ಆಗ ಕಾಂತಾಳ ಅಪ್ಪ ಸೂರಯ್ಯ ಬಾಗಿಲ ಬಳಿ ಬಂದು ನಿಂತಿದ್ದರು. ಮಗಳ ಮಾತು ಕೇಳಿ ಅವರ ಕಣ್ಣೂ ತೇವಪೂರಿತವಾಗಿತ್ತು. ಗಂಟಲು ಸರಿಪಡಿಸಿಕೊಂಡು ಒಳಬಂದ ಅಪ್ಪ : ನನ್ನ ಬಗ್ಗೆ ಚಿಂತೆ ಮಾಡಬೇಡ ಮಗಳೇ. ನೀನು ಇನ್ನೊಂದು ಮನೆಯ ದೀಪವಾಗಲು ಹೋಗುತ್ತಿದ್ದೀಯಾ. ಮಗಳು ಹೋದಳು ಅನ್ನೋ ನೋವಿಗಿಂತ, ನನ್ನ ಮಗಳು ಒಂದು ಹೊಸ ಸಂಸಾರವನ್ನು ಕಟ್ಟುತ್ತಿದ್ದಾಳೆ ಅನ್ನೋ ಹೆಮ್ಮೆ ನನಗಿದೆ. ಧರಣೀಶ್ ತುಂಬಾ ಒಳ್ಳೆಯ ಹುಡುಗ, ನಿನ್ನನ್ನು ಹೂವಿನಂತೆ ನೋಡಿಕೊಳ್ಳುತ್ತಾನೆ. ಆಗ ಕಾಂತಾ ಹೇಳಿದ್ಲು : ಗೊತ್ತು ಅಪ್ಪ, ಆದರೂ... ಈ ಹೊಸ್ತಿಲು ದಾಟುವುದು ಅಷ್ಟು ಸುಲಭವಲ್ಲ ಅನಿಸುತ್ತಿದೆ ನನಗೆ. ಇಷ್ಟು ದಿನ ನಾನು ನಿಮ್ಮ ಮಗಳು ಮಾತ್ರವಾಗಿದ್ದೆ. ನಾಳೆಯಿಂದ ನಾನು ಯಾರಿಗೋ ಹೆಂಡತಿ, ಯಾರಿಗೋ ಸೊಸೆ, ಇನ್ಯಾರಿಗೋ ನಾದಿನಿ. ಇಷ್ಟೊಂದು ಜವಾಬ್ದಾರಿಗಳನ್ನು ನಿಭಾಯಿಸುವ ಶಕ್ತಿ ನನಗಿದೆಯಾ ಅಪ್ಪಾ? ಲಕ್ಷ್ಮಿ (ನಗುತ್ತಾ)ಹೇಳಿದ್ಲು: ಖಂಡಿತ ಇದೆ ಕಾಂತಾ! ನೀನು ಕಾಲೇಜಿನಲ್ಲಿ ಬೆಸ್ಟ್ ಲೀಡರ್ ಆಗಿದ್ದವಳು. ಜೀವನದ ಈ ಹೊಸ ಇನ್ನಿಂಗ್ಸ್‌ನಲ್ಲೂ ನೀನೇ ಗೆಲ್ಲೋದು. ನೋಡು, ಧರಣೀಶ್ ಮೆಸೇಜ್ ಮಾಡಿದ್ದಾನೆ - ನಿನ್ನ ಸ್ಟೈಲ್ ನೋಡಲು ಕಾಯುತ್ತಿದ್ದೇನೆ ಅಂತ! ಕಾಂತಾ ಆ ಮೆಸೇಜ್ ನೋಡಿ ಮುಗುಳ್ನಕ್ಕಳು. ಆ ನಗು ಅವಳ ಆತಂಕವನ್ನು ಸ್ವಲ್ಪ ಕಡಿಮೆ ಮಾಡಿತ್ತು. ಕೆಲವು ಕ್ಷಣಗಳ ನಂತರ ಕಾಂತಾ ಹೇಳಿದ್ಲು : ಸರಿ ಅಮ್ಮ, ತಯಾರಾಗುತ್ತೇನೆ. ಈ ಮನೆಯ ನೆನಪುಗಳನ್ನು ಹೃದಯದ ಪೆಟ್ಟಿಗೆಯಲ್ಲಿ ಭದ್ರವಾಗಿ ಇಟ್ಟುಕೊಂಡು, ಹೊಸ ಮನೆಯ ಹೊಸ್ತಿಲನ್ನು ನಗುನಗುತ್ತಲೇ ತುಳಿಯುತ್ತೇನೆ. ನೀವೇನೂ ಬೇಜಾರ್ ಮಾಡ್ಕೋಬೇಡಿ. ಅಂತ ಹೇಳಿ ಕಾಂತಾ ಎದ್ದು ನಿಂತಾಗ ಕೈಬಳೆಗಳ ಸದ್ದು ಕೋಣೆಯಾದ್ಯಂತ ಮೊಳಗಿತು. ಅದು ಕೇವಲ ಬಳೆಗಳ ಸದ್ದಲ್ಲ, ಬದಲಾಗಲಿರುವ ಒಂದು ಸುಂದರ ಜೀವನದ ನಾಂದಿಯಾಗಿತ್ತು. ನಾನು ಮತ್ತೊಮ್ಮೆ ನನ್ನೊಳಗೇ ಮಾತನಾಡಿಕೊಂಡೆ. ಒಬ್ಬ ಹೆಣ್ಣಿಗೆ ಮದುವೆ ಎಂದರೆ ಕೇವಲ ಸಂಬಂಧಗಳ ಬದಲಾವಣೆಯಲ್ಲ; ಅದು ಅವಳ ವ್ಯಕ್ತಿತ್ವದ ಮರುಹುಟ್ಟು. ತವರಿನ ಮಮತೆ ಮತ್ತು ಸಂಸಾರದ ಹೊಣೆಗಾರಿಕೆಯ ನಡುವೆ ಅವಳು ಸಮತೋಲನ ಕಂಡುಕೊಳ್ಳುವ ಆ ಕ್ಷಣವೇ ಅತ್ಯಂತ ಭಾವನಾತ್ಮಕವಾದದ್ದು ಎಂದೆನಿಸಿತು ನನಗೆ.



**ಬೀಳ್ಕೊಡುಗೆಯ ಸಮಯ:** ಮದುವೆಯ ಮಂಟಪದ ಸದ್ದುಗದ್ದಲಗಳು ಕಾಂತಾಳಿಗೆ ದೂರದ ಸಮುದ್ರದ ಮೊರೆತದಂತೆ ಕೇಳಿಸುತ್ತಿತ್ತು. ಅಕ್ಷತೆಯ ಕಾಳುಗಳು ತಲೆಯ ಮೇಲೆ ಬೀಳುವಾಗ, ಅವಳಿಗೆ ನೆನಪಾಗಿದ್ದು ಅಪ್ಪ ಶಾಲೆಯ ಮೊದಲ ದಿನ ಆಶೀರ್ವದಿಸಿ ಕಳುಹಿಸಿದ ಕ್ಷಣ. ಅಂದು ಕೈಹಿಡಿದು ನಡೆಸಲು ಅಪ್ಪನಿದ್ದರು, ಇಂದು ಕೈಹಿಡಿದು ಕೊಡಲು ಅಪ್ಪನಿದ್ದಾರೆ. ಧಾರೆಯೆರೆಯುವಾಗ ತಣ್ಣನೆಯ ಹಾಲು ಕೈಮೇಲೆ ಬಿದ್ದಾಗ ಕಾಂತಾ ಒಮ್ಮೆ ಧರಣೀಶ್‌ನ ಮುಖ ನೋಡಿದಳು. ಅವನ ಕಣ್ಣುಗಳಲ್ಲಿ ನಂಬಿಕೆಯಿತ್ತು, ಆದರೆ ಅವಳ ಮನಸ್ಸಿನಲ್ಲಿ ಇನ್ನೂ ಪ್ರಶ್ನೆಗಳ ದಟ್ಟವಾದ ಮಂಜು ಮುಸುಕಿತ್ತು. ಮದುಮಗ ಧರಣೀಶ್‌ನ ಕಾರು ಹೊರಡಲು ಸಿದ್ಧವಾಗಿತ್ತು. ಕಾಂತಾಳ ತಂಗಿ ಸುನೀತಾ ಅಕ್ಕನ ಕೈ ಹಿಡಿದು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅಕ್ಕ, ಇನ್ಮೇಲೆ ರಾತ್ರಿ ಹೊತ್ತು ನಂಗೆ ಯಾರು ಕಥೆ ಹೇಳ್ತಾರೆ? ನನ್ನ ಪ್ರಾಜೆಕ್ಟ್ ಯಾರು ಮಾಡಿಕೊಡ್ತಾರೆ? ಕಾಂತಾ ನಗಲು ಯತ್ನಿಸಿದಳು, ಆದರೆ ಗಂಟಲು ಬಿಗಿದು ಬಂದಿತ್ತು. ನಾನೇನೂ ಪಾತಾಳಕ್ಕೆ ಹೋಗ್ತಿಲ್ಲ ಸುನೀತ, ಫೋನ್ ಮಾಡು, ಓಡಿ ಬರ್ತೀನಿ. ಅಪ್ಪ ಸೂರಯ್ಯ ದೂರದಲ್ಲೇ ನಿಂತು ಮರಕ್ಕೆ ಒರಗಿ ಆಕಾಶ ನೋಡುತ್ತಿದ್ದರು. ಅವರು ಅಳುತ್ತಿದ್ದಾರೆ ಎಂದು ಕಾಂತಾಳಿಗೆ ಗೊತ್ತು. ಅವಳು ಅಪ್ಪನ ಬಳಿ ಹೋಗಿ ಏನೂ ಮಾತನಾಡದೆ ಅಪ್ಪಿಕೊಂಡಳು. ಅಪ್ಪ ಸೂರಯ್ಯ ಹೋಗಿ ಬಾ ನನ್ನ ಮಗುವೆ. ಈ ಮನೆಗೆ ನೀನು ಯಾವತ್ತೂ ಮಗಳೇ. ಆದರೆ ಆ ಮನೆಯನ್ನು ನಿನ್ನ ಪ್ರೀತಿಯಿಂದ ಕಟ್ಟು, ಸುಖ-ದುಃಖ ಏನೇ ಇರಲಿ, ನಿನ್ನ ಮೌನಕ್ಕಿಂತ ನಿನ್ನ ಮಾತು ನಮಗೆ ಮುಖ್ಯ. ಏನಿದ್ದರೂ ಅಪ್ಪನಿಗೆ ಫೋನ್ ಮಾಡು, ಆಯ್ತಾ? ಕಾಂತಾ ತಲೆ ತಗ್ಗಿಸಿ ಕಾರು ಹತ್ತಿದಳು. ಕಾರು ಚಲಿಸುತ್ತಿದ್ದಂತೆ ಕನ್ನಡಿಯ ಮೂಲಕ ತನ್ನ ಮನೆಯ ಗೇಟು ಸಣ್ಣದಾಗುತ್ತಾ ಹೋಗುವುದನ್ನು ಅವಳು ನೋಡುತ್ತಿದ್ದಳು. ಅವಳ ಬದುಕಿನ ಒಂದು ವಾಲ್ಯೂಮ್ ಅಲ್ಲಿಗೆ ಮುಕ್ತಾಯವಾಗಿತ್ತು.


**ಹೊಸ ಲೋಕದ ಪ್ರವೇಶ:** ಹೊಸ ಮನೆಯ ಹೊಸ್ತಿಲ ಬಳಿ ಕಾಂತಾ ನಿಂತಿದ್ದಳು. ಧರಣೀಶ್ ನ ತಾಯಿ ವಸಂತಮ್ಮ ಆರತಿ ಎತ್ತಿ ಸ್ವಾಗತಿಸಿದ ವಸಂತಮ್ಮ: ಬಾರಮ್ಮ ಕಾಂತಾ, ಬಲಗಾಲು ಇಟ್ಟು ಒಳಗೆ ಬಾ. ಈ ಮನೆಯ ಲಕ್ಷ್ಮಿ ನೀನು. ನಿನಗೆ ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ, ನಿನ್ನ ತವರು ಮನೆಯಂತೆಯೇ ಭಾವಿಸು. ಎಂದರು. ಕಾಂತಾ ಮೆಲ್ಲನೆ ಬಲಗಾಲು ಇಟ್ಟು ಅಕ್ಕಿಯ ಸೇರನ್ನು ತಳ್ಳಿದಳು. ಆ ಅಕ್ಕಿಯ ಕಾಳುಗಳು ಚೆಲ್ಲಾಪಿಲ್ಲಿಯಾದಂತೆ ಅವಳ ಹಳೆಯ ನೆನಪುಗಳು ಚದುರಿ ಹೋದವು. ರಾತ್ರಿ ಹನ್ನೊಂದು ಗಂಟೆ. ಎಲ್ಲರೂ ದಣಿದು ಮಲಗಿದ್ದರು. ಕಾಂತಾ ಕಿಟಕಿಯ ಬಳಿ ನಿಂತು ಅಪರಿಚಿತವಾದ ಆ ಹಸಿರು ತೋಟವನ್ನು ನೋಡುತ್ತಿದ್ದಳು. ಧರಣೀಶ್ ರೂಮಿಗೆ ಬಂದವನೇ ಅವಳ ಮೌನವನ್ನು ಗಮನಿಸಿ ಹೇಳಿದನು: ಏನು ಯೋಚನೆ ಮಾಡ್ತಿದ್ದೀಯಾ ಕಾಂತಾ? ಮನೆ ನೆನಪಾಗ್ತಿದೆಯಾ? ಅದಕ್ಕೆ ಕೂಡಲೇ ಕಾಂತಾ : ನೆನಪಲ್ಲ ಧರಣೀಶ್, ಒಂದು ರೀತಿಯ ಶೂನ್ಯ ಭಾವ ಕಾಡ್ತಿದೆ. ಈ ರೂಮು, ಈ ಕಪಾಟು, ಈ ಗೋಡೆಗಳು... ಯಾವುದೂ ನಂದು ಅಂತ ಅನಿಸ್ತಿಲ್ಲ. ಈ ಹೊಸ ಜಗತ್ತಿನಲ್ಲಿ ನನ್ನ ಜಾಗ ಯಾವುದು ಅಂತ ಹುಡುಕ್ತಿದ್ದೀನಿ. ಅಂದಳು. ಆಗ ಧರಣೀಶ್ (ಅವಳ ಪಕ್ಕ ಬಂದು ನಿಂತು): ನೋಡು ಕಾಂತಾ, ಮದುವೆ ಅಂದ್ರೆ, ಕೇವಲ ಎರಡು ದೇಹಗಳ ಮಿಲನವಲ್ಲ, ಎರಡು ವಿಭಿನ್ನ ಪ್ರಪಂಚಗಳ ಬೆಸುಗೆ. ನಿನಗೆ ಈ ಮನೆ ಹೊಸದಾಗಿರಬಹುದು, ಆದರೆ ನನಗೂ ಈ ರೂಮಿನಲ್ಲಿ ನಿನ್ನ ಇರುವಿಕೆ ಹೊಸದೇ. ನಾವು ಇಬ್ಬರೂ ಸೇರಿ ಇದನ್ನು ನಮ್ಮ ಪ್ರಪಂಚ ಮಾಡಿಕೊಳ್ಳೋಣ. ನಿನಗೆ ಸಮಯ ಬೇಕು ಅಂದ್ರೆ, ತಗೋ, ನಾನು ಕಾಯ್ತೀನಿ. ಕಾಂತಾಳಿಗೆ ಅವನ ಮಾತುಗಳಲ್ಲಿ ಒಂದು ರೀತಿಯ ಆಪ್ತತೆ ಕಂಡಿತು. ಅವಳು ಮೆಲ್ಲನೆ ಕೇಳಿದಳು, ನಾನು ನನ್ನ ಕನಸುಗಳನ್ನು, ನನ್ನ ಬರವಣಿಗೆಯನ್ನು ಇಲ್ಲಿ ಮುಂದುವರಿಸಬಹುದಾ? ಮದುವೆಯ ನಂತರ ಹೆಣ್ಣಿನ ಹವ್ಯಾಸಗಳು ಅಡುಗೆಮನೆಯ ಹೊಗೆಯಲ್ಲಿ ಮರೆಯಾಗುತ್ತವೆ ಅಂತ ಕೇಳಿದ್ದೆ. ಹಾಗಾಗಿ ಕೇಳ್ತಿದ್ದೀನಿ ಅಷ್ಟೇ ಅಂದಳು ಕಾಂತಾ. ಧರಣೀಶ್ ಹೇಳಿದ : ಖಂಡಿತ ಇಲ್ಲ, ನಿನ್ನ ಬರವಣಿಗೆ ನಿನ್ನ ಗುರುತು. ಆ ಗುರುತನ್ನು ಕಳೆದುಕೊಂಡು ನೀನು ನನಗೆ ಸಿಕ್ಕರೆ ಅದರಲ್ಲಿ ಅರ್ಥವಿಲ್ಲ. ನೀನು ಕಥೆ ಬರಿ, ನಾನು ಮೊದಲ ಓದುಗನಾಗಿರ್ತೀನಿ. ಆಯ್ತಾ? ಅಂದಾಗ ಕಾಂತಾಳ ಮುಖದಲ್ಲಿ ಮೊದಲ ಬಾರಿಗೆ ನಿರಾಳತೆಯ ನಗು ಮೂಡಿತು. ಹೊಸ್ತಿಲ ಮೇಲೆ ಇಟ್ಟ ಹೆಜ್ಜೆ ತಪ್ಪಾಗಿಲ್ಲ ಎಂಬ ಭರವಸೆ ಅವಳಲ್ಲಿ ಮೂಡತೊಡಗಿತು. ಹೊರಗೆ ಚಂದಿರ ಹೊಸದೊಂದು ಅಧ್ಯಾಯದ ಮುನ್ನುಡಿ ಬರೆಯಲು ಸಿದ್ಧವಾಗುತ್ತಿದ್ದಂತೆ ಬೆಳ್ಳಗೆ ನಗುತ್ತಿದ್ದ,

**ಸಾಂತ್ವನದ ಮಾತುಗಳು:** ಮದುವೆಯ ನಂತರದ ಮೊದಲ ತಿಂಗಳು ಕಾಂತಾಳಿಗೆ ಒಂದು ವಿಚಿತ್ರ ಅನುಭವವನ್ನು ನೀಡಿತು. ಬೆಳಿಗ್ಗೆ ಎದ್ದ ತಕ್ಷಣ ತನ್ನ ಮನೆಯಲ್ಲಿ ಅಪ್ಪನಿಗೆ ಕಾಫಿ ಕೊಡುತ್ತಿದ್ದವಳು, ಇಲ್ಲಿ ಅತ್ತೆ ವಸಂತಮ್ಮ ಅಡುಗೆಮನೆಯಲ್ಲಿ ಕೆಲಸ ಮಾಡುವ ಶಬ್ದ ಕೇಳಿ ಧಾವಿಸಬೇಕಿತ್ತು. ಒಂದು ದಿನ ಬೆಳಿಗ್ಗೆ ಕಾಂತಾ ತನ್ನ ಕಾದಂಬರಿಯ ಮುಂದಿನ ಭಾಗವನ್ನು ಬರೆಯಲು ಕುಳಿತಿದ್ದಳು. ಪದಗಳು ಹರಿಯುತ್ತಿದ್ದವು, ಪಾತ್ರಗಳು ಜೀವ ಪಡೆಯುತ್ತಿದ್ದವು. ಅಷ್ಟರಲ್ಲಿ ಅತ್ತೆ ವಸಂತಮ್ಮ ಕರೆದು. ಕಾಂತಾ, ಇವತ್ತು ನಮ್ಮ ದೂರದ ಸಂಬಂಧಿಕರು ಮನೆಗೆ ಬರ್ತಿದ್ದಾರೆ. ಹದಿನೈದು ಜನಕ್ಕೆ ಅಡುಗೆ ಮಾಡಬೇಕು. ಸ್ವಲ್ಪ ಸಹಾಯ ಮಾಡ್ತೀಯಾ ಮಗಳೇ? ಎಂದು ಕೇಳಿದಾಗ, ಇದೋ ಬಂದೆ ಅಮ್ಮ ಎಂದು ಕಾಂತಾ ಎದ್ದು ಹೋದಳು. ಅಡುಗೆ ಮಾಡುತ್ತಾ, ಅಮ್ಮ, ಇಲ್ಲಿ ಇಷ್ಟೊಂದು ಜನ ಬರ್ತಾರೆ, ಹೋಗ್ತಾರೆ... ಇವರೆಲ್ಲರ ಹೆಸರನ್ನು ನೆನಪಿಟ್ಟುಕೊಳ್ಳುವುದೇ ನನಗೊಂದು ದೊಡ್ಡ ಕೆಲಸ ಅನಿಸುತ್ತಿದೆ. ನಮ್ಮ ಮನೆಯಲ್ಲಿ ನಾವಿದ್ದದ್ದೇ ಮೂರು ಜನ. ಅಂದಳು. ವಸಂತಮ್ಮ (ನಗುತ್ತಾ): ನೋಡು ಕಾಂತಾ, ದೊಡ್ಡ ಸಂಸಾರ ಅಂದ್ರೆ ಅಕ್ಷರಗಳಿದ್ದಂತೆ. ಬಿಡಿ ಬಿಡಿಯಾಗಿದ್ದರೆ ಅದಕ್ಕೆ ಅರ್ಥ ಕಡಿಮೆ, ಆದರೆ ಎಲ್ಲವೂ ಸೇರಿದಾಗ ಒಂದು ಸುಂದರ ಕಾವ್ಯವಾಗುತ್ತೆ. ಇವತ್ತು ನಿನಗೆ ಇದು ಸುಸ್ತು ಅಂತ ಅನ್ನಿಸಬಹುದು, ಆದರೆ ನಾಳೆ ನೀನು ಒಬ್ಬಳೇ ಇದ್ದಾಗ ಇದೇ ಸದ್ದು-ಗದ್ದಲಗಳು ನಿನಗೆ ನೆಮ್ಮದಿ ಕೊಡುತ್ತವೆ. ಎಂದರು. ಆಗ ಕಾಂತಾ: ನಿಮ್ಮ ಮಾತು ನಿಜವಿರಬಹುದು ಅಮ್ಮ. ಆದರೆ ನನ್ನ ಕಾದಂಬರಿಯ ಪಾತ್ರಗಳು ನನ್ನನ್ನು ಕರೆಯುತ್ತಿವೆ. ಅಡುಗೆಯ ಘಮದ ನಡುವೆ ಆ ಸಾಹಿತ್ಯದ ಸುಗಂಧ ಎಲ್ಲೋ ಮಾಯವಾಗುತ್ತಿದೆ ಅಂತ ಭಯವಾಗುತ್ತಿದೆ. ಅಂದಾಗ ತಕ್ಷಣ ವಸಂತಮ್ಮ: ಹಾಗೆ ಅಂದುಕೋಬೇಡ ಮಗಳೇ. ಸಂಸಾರ ಅನ್ನೋದು ನಿನಗೆ ಹೊಸ ಕಥೆಗಳನ್ನು ಕೊಡುತ್ತೆ ಹೊರತು, ನಿನ್ನ ಹಳೆಯ ಕಥೆಗಳನ್ನು ಕಿತ್ತುಕೊಳ್ಳಲ್ಲ. ನಾನು ನಿನ್ನ ದಾರಿಗೆ ಅಡ್ಡ ಬರಲ್ಲ, ನಿನ್ನ ದಾರಿಯಾಗ್ತೀನಿ. ಅಂದ್ರು. ಅಡುಗೆ ಮನೆಯ ಕೆಲಸ ಮಾಡುತ್ತಾ ಮಾಡುತ್ತಾ, ಹಾಗೆಯೇ ಕಂಪ್ಯೂಟರ್ ಕಡೆ ಒಮ್ಮೆ ನೋಡಿದಳು, ಅರ್ಧಕ್ಕೆ ನಿಂತ ಕಥೆಯ ಸಾಲುಗಳು ಅವಳನ್ನು ಅಣಕಿಸುವಂತಿದ್ದವು. ಆದರೂ ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ಹೋದಳು. ಇಡೀ ದಿನ ಅಡುಗೆ ಮನೆಯ ಬಿಸಿ, ಪಾತ್ರೆಗಳ ಸದ್ದು ಮತ್ತು ಅತಿಥಿಗಳ ಉಪಚಾರದಲ್ಲಿ ಕಳೆದುಹೋಯಿತು. ರಾತ್ರಿಯ ಹೊತ್ತಿಗೆ ಅವಳು ತೀವ್ರವಾಗಿ ದಣಿದಿದ್ದಳು. ಧರಣೀಶ್: ಏನಾಯ್ತು ಕಾಂತಾ? ಮುಖ ಯಾಕೋ ಬಾಡಿದೆ? ಎಂದು ಕೇಳಿದಾಗ ಕಾಂತಾ ಧರಣೀಶ್, ಇಲ್ಲಿ ಅತಿಥಿಗಳು ಬರುವುದು, ಹೋಗುವುದು... ಸಂಪ್ರದಾಯಗಳು ಎಲ್ಲವೂ ಸಂತೋಷವೇ. ಆದರೆ ನನ್ನ ಮನಸ್ಸಿನಲ್ಲಿ ನಾನು ಎಲ್ಲಿ ಕಳೆದುಹೋಗ್ತಿದ್ದೀನಿ ಅಂತ ಅನಿಸ್ತಿದೆ. ಇವತ್ತು ಒಂದು ಒಳ್ಳೆ ಅಧ್ಯಾಯ ಬರೆಯಬೇಕಿತ್ತು, ಇಡೀ ದಿನ ಸೌಟು ಹಿಡಿದೇ ಕಳೆದುಹೋಯಿತು. ಎಂದಳು. ಕೂಡಲೇ ಧರಣೀಶ್ ಅವಳ ಸಂಕಟವನ್ನು ಅರ್ಥಮಾಡಿಕೊಂಡನು. ಮಾರನೆಯ ದಿನ ಬೆಳಿಗ್ಗೆ ಅವನು ಅಮ್ಮನ ಹತ್ತಿರ ಮಾತನಾಡಿದನು. ಅಮ್ಮ, ಕಾಂತಾ ಬರೆಯುವ ಹವ್ಯಾಸ ಹೊಂದಿದ್ದಾಳೆ ಅಂತ ನಿನಗೆ ಗೊತ್ತು. ಅವಳಿಗೂ ಸ್ವಲ್ಪ ಸಮಯ ಬೇಕು. ಅಡುಗೆ ಕೆಲಸವನ್ನೆಲ್ಲಾ ಅವಳೊಬ್ಬಳೇ ಮಾಡಬೇಕು ಅಂತ ಏನಿಲ್ಲ. ಅಂದಾಗ ಮಗನ ಮುಖವನ್ನು ನೋಡಿ ವಸಂತಮ್ಮ ಒಂದು ಕ್ಷಣ ಮೌನವಾದರು. ಅವರ ಕಾಲದಲ್ಲಿ ಸೊಸೆ ಎಂದರೆ ಅಡುಗೆಮನೆಯೇ ಪ್ರಪಂಚವಾಗಿತ್ತು. ಆದರೆ ಈಗಿನ ಕಾಲ ಬೇರೆ ಎಂದು ಅವರಿಗೆ ತಿಳಿದಿತ್ತು. ವಸಂತಮ್ಮ (ಸಂಜೆ ಕಾಂತಾಳ ಬಳಿ ಬಂದು): ನೋಡು ಕಾಂತಾ, ನನಗೂ ನಿನ್ನ ಹಾಗೆ ಓದಬೇಕು, ಬರೆಯಬೇಕು ಅನ್ನೋ ಆಸೆ ಇತ್ತು. ಆದರೆ ಆ ಕಾಲದಲ್ಲಿ ಯಾರೂ ಪ್ರೋತ್ಸಾಹ ನೀಡಲಿಲ್ಲ, ನನ್ನ ಮಗ ನಿನ್ನ ಪರವಾಗಿ ಮಾತನಾಡಿದಾಗ ನನಗೆ ಖುಷಿಯಾಯ್ತು. ನೀನು ನನ್ನ ಸೊಸೆ ಮಾತ್ರವಲ್ಲ : ನೀನು ಒಬ್ಬ ಬರಹಗಾರ್ತಿ. ಆ ಸಮಯದಲ್ಲಿ ಯಾರೂ ನಿನ್ನನ್ನು ಕರೆಯಲ್ಲ. ಅಂದಾಗ ಕಾಂತಾಳ ಕಣ್ಣುಗಳಲ್ಲಿ ಆನಂದಭಾಷ್ಪ ತುಂಬಿತು. ಅವಳು ಅತ್ತೆಯನ್ನು ಅಪ್ಪಿಕೊಂಡಳು.

**ಹಳೆ ಬೇರು - ಹೊಸ ಚಿಗುರು:** ಕೆಲವು ದಿನಗಳ ನಂತರ ಕಾಂತಾ ತನ್ನ ತವರು ಮನೆಗೆ ಮೊದಲ ಬಾರಿಗೆ ಉಡುಗೊರೆ ನೀಡಲು ಹೋದಳು. ತನ್ನ ಮೊದಲ ಕಾದಂಬರಿ ಪ್ರಕಟವಾಗಿ ಅದರ ಸಂಭಾವನೆ ಬಂದಿತ್ತು. ಆ ಹಣದಲ್ಲಿ ಅಪ್ಪನಿಗೆ ಒಂದು ರೇಷ್ಮೆ ಪಂಚೆ ಮತ್ತು ಅಮ್ಮನಿಗೆ ಒಂದು ಸೀರೆ ತಂದಿದ್ದಳು. ಮನೆಗೆ ಹೋದಾಗ ಅಪ್ಪ ಸೂರಯ್ಯ ಹಳೆಯ ಕುರ್ಚಿಯಲ್ಲಿ ಕುಳಿತು ಪೇಪರ್ ಓದುತ್ತಿದ್ದರು. ಮಗಳನ್ನು ನೋಡಿದ ತಕ್ಷಣ ಅವರ ಮುಖದಲ್ಲಿ ನೂರು ದೀಪ ಒಮ್ಮೆಲೇ ಹಚ್ಚಿದಷ್ಟು ಸಂಭ್ರಮ. ಬಾ ಮಗಳೇ! ಆ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರಾ? ಧರಣೀಶ್ ನಿನ್ನನ್ನು ಚೆನ್ನಾಗಿ ನೋಡ್ಕೊಳ್ತಿದ್ದಾನೆ ಅಲ್ವಾ? ಎಂದು ವಿಚಾರಿಸಿದರು. ತವರು ಮನೆಯಲ್ಲಿ ಅಪ್ಪ ಮತ್ತು ಅಮ್ಮನ ಜೊತೆ ಕಳೆದ ಆ ಭಾವನಾತ್ಮಕ ಕ್ಷಣಗಳು ಅವಳ ನೆನಪಿಗೆ ಬಂದವು. ಅಮ್ಮ ಚಂದ್ರಮ್ಮ ( ಕಾಂತಾಳ ತಲೆ ಸವರುತ್ತಾ): ಕಾಂತಾ, ಅಲ್ಲಿ ಸರಿಯಾಗಿ ಊಟ ಮಾಡ್ತೀಯಾ ಅಲ್ವಾ? ನೀನು ಹೋದಾಗಿನಿಂದ ನಿನ್ನ ರೂಮು ಅನಾಥವಾಗಿ ಬಿದ್ದಿದೆ. ಸುನೀತ ದಿನಾಲೂ ನಿನ್ನ ಬಟ್ಟೆಗಳನ್ನೇ ನೋಡ್ತಾ ಇರ್ತಾಳೆ. ಆಗ ಕಾಂತಾ ಹೇಳಿದ್ಲು :ನನಗೂ ಇಲ್ಲಿನ ಪ್ರತಿ ವಸ್ತು ನೆನಪಾಗುತ್ತೆ ಅಮ್ಮ. ಆ ರೂಮಿನ ಕಿಟಕಿ, ಅಲ್ಲಿಂದ ಕಾಣುವ ಮಲ್ಲಿಗೆ ಗಿಡ... ಅಲ್ಲಿ ಹೋದ ಮೇಲೆ ನನಗೆ ಗೊತ್ತಾಗಿದ್ದು, ಹೆಣ್ಣು ಹುಟ್ಟೋದು ಒಂದು ಮನೆಯಲ್ಲಾದರೂ, ಅವಳು ಬೆಳೆಯೋದು ಎರಡು ಮನೆಗಳ ನೆರಳಿನಲ್ಲಿ ಅಂತ. ಅಪ್ಪ, ಇವತ್ತು ನಾನು ನಿಮ್ಮ ಮಗಳಾಗಿ ಬರಲಿಲ್ಲ, ಒಬ್ಬ ಲೇಖಕಿಯಾಗಿ ಬಂದಿದ್ದೀನಿ. ಇಗೋ, ನನ್ನ ಮೊದಲ ಕಾದಂಬರಿಯ ಸಂಭಾವನೆಯಲ್ಲಿ ತಂದ ಉಡುಗೊರೆ. ಎಂದು ಹೇಳಿದಳು. ಅಪ್ಪ ಆ ಪಂಚೆಯನ್ನು ಕೈಗೆತ್ತಿಕೊಂಡಾಗ ಅವರ ಕೈಗಳು ನಡುಗುತ್ತಿದ್ದವು. ಮಗಳು ಗಳಿಸಿದ ಮೊದಲ ಸಂಪಾದನೆ ಅವರಿಗೆ ಕೋಟಿ ರೂಪಾಯಿಗಿಂತ ದೊಡ್ಡದಾಗಿತ್ತು. ಅಪ್ಪ (ಪಂಚೆಯನ್ನು ಕೈಯಲ್ಲಿ ಹಿಡಿದು): ನೋಡು ಮಗಳೇ, ನೀನು ಸಣ್ಣವಳಿದ್ದಾಗಿನಿಂದಇಷ್ಟು ದಿನ ನಾನು ಕೊಟ್ಟ ಬಟ್ಟೆಯನ್ನು ನೀನು ಉಟ್ಟಿದ್ದೀಯಾ. ಇವತ್ತು ನೀನು ಕೊಟ್ಟ ಪಂಚೆಯನ್ನು ನಾನು ಉಡಬೇಕು. ಇದು ಕೇವಲ ಬಟ್ಟೆಯಲ್ಲ ಮಗಳೇ, ನನ್ನ ಮಗಳು ಸ್ವಾಭಿಮಾನಿಯಾಗಿ ಬೆಳೆದಿದ್ದಾಳೆ ಅನ್ನೋ ವಿಜಯದ ಪತಾಕೆ. ಆ ಮನೆಯಲ್ಲಿ ನಿನ್ನ ವ್ಯಕ್ತಿತ್ವವನ್ನು ಎಂದೂ ಬಿಟ್ಟುಕೊಡಬೇಡ. ಆಗ ಕಾಂತಾ ಹೇಳಿದ್ಲು : ಖಂಡಿತ ಅಪ್ಪ. ಧರಣೀಶ್ ತುಂಬಾ ಸಪೋರ್ಟಿವ್ ಆಗಿದ್ದಾರೆ. ಆದರೂ ನೀವು ಕಲಿಸಿಕೊಟ್ಟ ಶೂನ್ಯದ ಹಸ್ತಾಕ್ಷರದ ಪಾಠ (ನೋವಿನಲ್ಲೂ ನಗುವುದು) ನನಗೆ ಈಗ ನೆರವಾಗುತ್ತಿದೆ. ಸಂಬಂಧಗಳನ್ನು ಉಳಿಸಿಕೊಳ್ಳಲು ಅಹಂಕಾರ ಬಿಡಬೇಕು ಅಂತ ನೀವು ಹೇಳ್ತಿದ್ದರಲ್ಲ, ಅದರ ಅರ್ಥ ಈಗ ಆಗ್ತಿದೆ.

ಎಂದಳು. ತಕ್ಷಣ ಒಳ್ಳೆಯದಾಗಲಿ ಮಗಳೇ. ಹೊಸ್ತಿಲು ದಾಟುವಾಗ ನಿನ್ನ ಕಣ್ಣಲ್ಲಿ ನೀರಿತ್ತು, ಆದರೆ ಈಗ ಹಿಂತಿರುಗಿ ನೋಡುವಾಗ ನಿನ್ನ ಮುಖದಲ್ಲಿ ಗೆಲುವಿನ ನಗುವಿದೆ. ಒಬ್ಬ ತಂದೆಗೆ ಇದಕ್ಕಿಂತ ದೊಡ್ಡ ಸಂಪಾದನೆ ಇನ್ನೇನಿದೆ? ಎಂದು ಅಪ್ಪ ಸೂರಯ್ಯ ಹೇಳುತ್ತಾ, ಇಲ್ನೋಡು ಮಗಳೇ ಕಾಂತಾ, ಹೆಣ್ಣು ಮದುವೆಯಾಗಿ ಹೋದರೆ ಅವಳ ಸಂಬಂಧ ಕಡಿದುಹೋಗುತ್ತೆ ಅಂತ ಎಲ್ಲರೂ ಹೇಳ್ತಾರೆ. ಆದರೆ ನೀನು ಆ ಮನೆಯ ಸೊಸೆಯಾಗಿ ಜವಾಬ್ದಾರಿ ನಿಭಾಯಿಸುತ್ತಲೇ ಈ ಮನೆಯ ಮಗಳಾಗಿ ನಮ್ಮ ಹೆಮ್ಮೆ ಹೆಚ್ಚಿಸಿದ್ದೀಯಾ. ಇದೇ ಅಲ್ವಾ ಹೊಸ್ತಿಲ ಮೇಲಿನ ಹೆಜ್ಜೆಯ ನಿಜವಾದ ಗೆಲುವು? ಎಂದರು. ಕಾಂತಾಳಿಗೆ ಅಂದು ಅರ್ಥವಾಯಿತು. ಹೊಸ್ತಿಲು ಎನ್ನುವುದು ದಾಟಬಾರದ ಲಕ್ಷ್ಮಣ ರೇಖೆಯಲ್ಲ, ಅದು ಎರಡು ಪ್ರಪಂಚಗಳನ್ನು ಜೋಡಿಸುವ ಕೊಂಡಿ ಎಂದು ಅಂದುಕೊಂಡಳು. ನಾನು ಮತ್ತೊಮ್ಮೆ ಕಾಂತಾ ಧರಣೀಶ್ ಸಂಸಾರವನ್ನು ನೆನಪಿಸಿಕೊಂಡು ಸ್ವತಃ ಸಂತಸ ಪಟ್ಟೆ. ಕಾಂತಾ ಈಗ ಎರಡೂ ಮನೆಗಳ ಪ್ರೀತಿಯ ಕೊಂಡಿಯಾಗಿದ್ದಳು. ಸಂಜೆ ಅವಳು ಧರಣೀಶ್ ನ ಜೊತೆ ಬಾಲ್ಕನಿಯಲ್ಲಿ ಕುಳಿತು ಕಾಫಿ ಕುಡಿಯುತ್ತಾ ತನ್ನ ಹೊಸ ಕಾದಂಬರಿಯ ಬಗ್ಗೆ ಚರ್ಚಿಸುತ್ತಿದ್ದಳು. ಅವಳ ಲೇಖನಿ ಈಗ ಅಡೆತಡೆಯಿಲ್ಲದೆ ಸಾಗುತ್ತಿತ್ತು. ಅವಳು ಕಂಡುಕೊಂಡ ಸತ್ಯ ಒಂದೇ: ಹೊಸ್ತಿಲು ದಾಟುವ ಹೆಣ್ಣಿಗೆ ಆತ್ಮವಿಶ್ವಾಸದ ಆಸರೆ ಸಿಕ್ಕರೆ, ಅವಳು ಭೂಮಿಯನ್ನೇ ಸ್ವರ್ಗ ಮಾಡಬಲ್ಲಳು.

**- ಕೆ.ಎನ್. ಚಿದಾನಂದ.** ( ನಾನಂಚಿ ) ಹಾಸನ.



## ವಿದ್ಯಾರ್ಥಿನಿಯರಿಗೆ ಶೇ.50 ರಷ್ಟು ಮೀಸಲಾತಿ ನೀಡಿ

• ಪ್ರಜೋದಯ ವರದಿ

**ಭುವನೇಶ್ವರ:** ಒಡಿಶಾದಲ್ಲಿ ವೈದ್ಯಕೀಯ, ಇಂಜಿನೀಯರಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್ ಗಳಿಗೆ ಶೇ.50ರಷ್ಟು ಮೀಸಲಾತಿ ಅನುಷ್ಠಾನ ಗೊಳಿಸಬೇಕೆಂದು ಕಾಂಗ್ರೆಸ್ ಬುಧವಾರ ಆಗ್ರಹಿಸಿದೆ.

ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವಿದ್ಯಾರ್ಥಿಗಳಿಗೆ ಮೀಸಲಾತಿ ನೀಡುವ ಸರ್ಕಾರದ ನಿರ್ಧಾರವನ್ನು ನಾವು ಸ್ವಾಗತಿಸುತ್ತೇವೆ. ಕಾಂಗ್ರೆಸ್ ಬಹಳ ದಿನಗಳಿಂದ ಈ ಕುರಿತಾಗಿ ಒತ್ತಾಯ ಸುತ್ತಿದೆ. ಆದರೂ ವಿದ್ಯಾರ್ಥಿಗಳನ್ನು ಏಕೆ ಹೊರಗಿಡಲಾಗಿದೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ನಿರಂಜನ್ ಪಟ್ನಾಯಕ್ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದ್ದಾರೆ.

ಒಡಿಶಾದ ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧದಷ್ಟಿರುವುದರಿಂದ, ಸರ್ಕಾರವು ಅವರಿಗೆ ಉನ್ನತ ಅಧ್ಯಯನದಲ್ಲಿ ಶೇ.50 ರಷ್ಟು ಮೀಸಲಾತಿ ನೀಡಬೇಕೆಂದು ಕಾಂಗ್ರೆಸ್ ಮುಖಂಡರು ಒತ್ತಾಯಿಸಿದ್ದಾರೆ.

2026–27ರ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ದಲ್ಲಿ ಎಸ್‌ಸಿ, ಎಸ್‌ಟಿ ಕೋಟಾವನ್ನು ಹೆಚ್ಚಿಸುವುದಾಗಿ ಹಾಗೂ ಸಾಮಾಜಿಕ ವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಹೊಸ ಕೋಟಾವನ್ನು ರಾಜ್ಯ ಸರ್ಕಾರ ಘೋಷಿಸಿದೆ.

## ಉತ್ತರ ಪತ್ರಿಕೆ ಮರು ಮೌಲ್ಯಮಾಪನಕ್ಕಾಗಿ 40 ಸಾವಿರ ವಿದ್ಯಾರ್ಥಿಗಳಿಂದ ಅರ್ಜಿ

• ಪ್ರಜೋದಯ ವರದಿ

**ನವದೆಹಲಿ:** ಸಿಬಿಎಸ್‌ಇ 12ನೇ ತರಗತಿಯ ಉತ್ತರ ಪತ್ರಿಕೆಗಳ ಪರಿಶೀಲನೆ ಮತ್ತು ಮರುಮೌಲ್ಯಮಾಪನ ಕ್ಕಾಗಿ ಪೋರ್ಟಲ್ ತೆರೆಯಲಾಗಿದೆ. ಬುಧವಾರ ಬೆಳಗ್ಗಿನ ಜಾವದವರೆಗೆ ಸುಮಾರು 40 ಸಾವಿರ ವಿದ್ಯಾರ್ಥಿಗಳು ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ್ದಾರೆ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ತಿಳಿಸಿದೆ.

ಪರಿಶೀಲನೆ ಮತ್ತು ಮರುಮೌಲ್ಯಮಾಪನ ಪೋರ್ಟಲ್‌ನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಇಂಡಿಯನ್ ಬ್ಯಾಂಕ್‌ಗಳ ಪೇಮೆಂಟ್ ಗೇಟ್‌ವೇಗಳು ಲಭ್ಯವಿವೆ ಎಂದು ಮಂಡಳಿ ತಿಳಿಸಿದೆ. ಪಾವತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ವಿದ್ಯಾರ್ಥಿಗಳು ಈ ಬ್ಯಾಂಕ್‌ಗಳಲ್ಲಿ ಖಾತೆಯನ್ನು ಹೊಂದುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

ಪಾವತಿ ಪೂರ್ಣಗೊಳಿಸಲು ವಿದ್ಯಾರ್ಥಿಗಳು ಈ ಬ್ಯಾಂಕ್‌ಗಳಲ್ಲಿ ಖಾತೆಯನ್ನು ಹೊಂದಿರಬೇಕಾಗಿಲ್ಲ, ಬದಲಿಗೆ ಹಣ ಪಾವತಿಸಲು ಈ ಯಾವುದೇ ಪೇಮೆಂಟ್ ಗೇಟ್‌ವೇಗಳನ್ನು ಬಳಸಬಹುದೆಂದು ಸಿಬಿಎಸ್‌ಇ ಹೇಳಿದೆ.

ಅಭ್ಯರ್ಥಿಗಳು ನಿಗದಿತ ಗೇಟ್‌ವೇಗಳ ಮೂಲಕ ಯುಪಿಐ, ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಸೇರಿ ಆನ್‌ಲೈನ್ ಪಾವತಿ ಆಯ್ಕೆಗಳನ್ನು ಬಳಸಬಹುದು. ಸರಿಯಾದ ಮಾಹಿತಿ ಗಾಗಿ ದಯವಿಟ್ಟು ಅಧಿಕೃತ ಸಿಬಿಎಸ್‌ಇ ಪ್ರಕಟಣೆ ಗಳನ್ನು ಮಾತ್ರ ನಂಬುವಂತೆ ಮಂಡಳಿ ಮನವಿ ಮಾಡಿದೆ.

ಡಿಜಿಟಲ್ ಮೌಲ್ಯಮಾಪನಕ್ಕಾಗಿ ಪರಿಚಯಿಸಲಾದ ಆನ್-ಸ್ಕ್ರೀನ್ ಮಾರ್ಕಿಂಗ್ ವ್ಯವಸ್ಥೆಯಲ್ಲಿ ಉಂಟಾದ ಲೋಪ ಹಾಗೂ ತಾಂತ್ರಿಕ ಅಡಚಣೆ ಬಗ್ಗೆ ದೇಶದಾದ್ಯಂತ ವಿದ್ಯಾರ್ಥಿಗಳು ಮತ್ತು ಪೋಷಕರು ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಉತ್ತರ ಪತ್ರಿಕೆಗಳ ಪರಿಶೀಲನೆ ಮತ್ತು ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಮೇ 29ರಂದೇ ಪ್ರಾರಂಭವಾಗುವ ನಿರೀಕ್ಷೆಯಿದ್ದ ಎಂದು ಸಿಬಿಎಸ್‌ಇ ಈ ಹಿಂದೆ ತಿಳಿಸಿತ್ತು. ನಿಗದಿತ ದಿನಾಂಕಕ್ಕಿಂತ ಕೆಲ ದಿನಗಳ ಬಳಿಕ (ಜೂನ್2) ಈ ಪೋರ್ಟಲ್ ಅನ್ನು ಸಿಬಿಎಸ್‌ಇ ಆರಂಭಿಸಿದೆ. ವಿದ್ಯಾರ್ಥಿಗಳು ಈಗಾಗಲೇ ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಕಾಪಿಗಳನ್ನು ಪಡೆದಿದ್ದು, ವ್ಯತ್ಯಾಸಗಳ ಪರಿಶೀಲನೆ ಅಥವಾ ಮರು ಮೌಲ್ಯಮಾಪನಕ್ಕಾಗಿ ಮೀಸಲಾದ ಅಧಿಕೃತ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು. ಈ ಪೋರ್ಟಲ್ ಜೂನ್ 6ರ ಮಧ್ಯರಾತ್ರಿವರೆಗೆ ತೆರೆದಿರಲಿದೆ ಎಂದು ಹೇಳಿದೆ.

ಮೌಲ್ಯಮಾಪನ ಮಾಡಲಾದ ತಮ್ಮ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಈ ಸೌಲಭ್ಯ ಲಭ್ಯವಿರುತ್ತದೆ. ಉತ್ತರ ಪತ್ರಿಕೆಯ ಸ್ಕ್ಯಾನ್ ಮಾಡಿದ ಪ್ರತಿಯಲ್ಲಿ ಕಂಡುಬರುವ ದೋಷಗಳ ಪರಿಶೀಲನೆ ಮತ್ತು ಉತ್ತರಗಳ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ಪೋರ್ಟಲ್ 2026ರ ಜೂನ್ 2ರಂದು ತೆರೆಯಲಾಗಿದೆ. ವಿದ್ಯಾರ್ಥಿಗಳು ತಮಗೆ ಒದಗಿಸಲಾದ ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿಯಲ್ಲಿ ಕಂಡುಬರುವ ದೋಷಗಳನ್ನು (ಯಾವುದಾದರೂ ಇದ್ದರೆ) ಪರಿಶೀಲಿಸುವ ಸೌಲಭ್ಯವನ್ನು ಪಡೆಯಬಹುದು ಮತ್ತು ಮೌಲ್ಯಮಾಪನದಿಂದ ತೃಪ್ತರಾಗದಿದ್ದರೆ ಉತ್ತರಗಳ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದೆಂದು ಸಿಬಿಎಸ್‌ಇ ತಿಳಿಸಿದೆ.

## ಎಲ್.ಕೆ.ಅತೀಕ್ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ



**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆರ್ಥಿಕ ಸಲಹೆಗಾರರ ನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ, ಪ್ರಸ್ತುತ ಬೆಂಗಳೂರು ಬಿಸಿನೆಸ್ ಕಾರಿಡಾರ್ ಅಧ್ಯಕ್ಷರಾಗಿ ರುವ ಎಲ್.ಕೆ.ಅತೀಕ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾ ರಣಾ ಇಲಾಖೆ ಅಧಿಕೃತ ಅಧಿಸೂಚನೆ ಪ್ರಕಟಿಸಿದೆ.

## ಮೇಲ್ಮನೆಗೆ ಹರಿಪ್ರಸಾದ್ ಸೇರಿ ನಾಲ್ವರಿಗೆ ಟಿಕೆಟ್

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕ ವಿಧಾನಸಭೆಯಿಂದ ವಿಧಾನ ಪರಿಷತ್ ದ್ವೈವಾರ್ಷಿಕ ಚುನಾವ ಣೆಗೆ ಆಡಳಿತರೂಢ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ಪ್ರಕಟಿಸಿದೆ.

ವಿಧಾನ ಪರಿಷತ್‌ನ ಏಳು ಸ್ಥಾನಗಳಲ್ಲಿ ಕಾಂಗ್ರೆಸ್ ತನ್ನ ಪಾಲಿನ ನಾಲ್ಕು ಸ್ಥಾನಗಳಿಗೆ ಬಿ.ಕೆ. ಹರಿಪ್ರಸಾದ್, ಪಿ.ವಿ.ಮೋಹನ್, ಶಿವಣ್ಣ ಮಳವಳ್ಳಿ ಹಾಗು ತಿಪ್ಪಣ್ಣಪ್ಪ ಕಮಕನೂರು ಹೆಸರುಗಳನ್ನು ಎಐಸಿಸಿ ಪ್ರಕಟಿಸಿದೆ.

ಈ ಮೂಲಕ ಬಿ.ಕೆ.ಹರಿಪ್ರಸಾದ್ ಹಾಗು ತಿಪ್ಪಣ್ಣಪ್ಪ ಕಮಕನೂರು ಅವರನ್ನು ಮತ್ತೊಂದು ಅವಧಿಗೆ ಮುಂದುವರೆಸಿದ್ದು, ಇನ್ನುಳಿದ ಎರಡು ಸ್ಥಾನಗಳಿಗೆ ಹೊಸ ಮುಖಕ್ಕೆ ಮಣೆ ಹಾಕ ಲಾಗಿದೆ. ಇನ್ನು ನಾಲ್ಕು ಸ್ಥಾನಕ್ಕೂ ಒಬಿಸಿ ಸಮುದಾಯದವರಿಗೆ ಮಣೆ ಹಾಕಲಾಗಿದೆ. ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಜೂನ್ 18 ರಂದು ಚುನಾವಣೆ ನಡೆಯಲಿದೆ.

## ಡಿಕೆಶಿ ಪ್ರಮಾಣವಚನ: ಕಾರ್ಯಕರ್ತರಿಂದ ಸಂಭ್ರಮಾಚರಣೆ



• ಪ್ರಜೋದಯ ವರದಿ

**ಹಾಸನ:** ರಾಜ್ಯದ ನೂತನ ಮುಖ್ಯ ಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ ಹಿನ್ನಲೆ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆಯ ಸಮೀಪ ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ ಅವರ ನೇತೃತ್ವದಲ್ಲಿ ಪ್ರಮಾಣವಚನ ಸಮಾರಂಭ ವನ್ನು ನೇರಪ್ರಸಾರದ ಮೂಲಕ ಸಾರ್ವಜನಿ ಕರು ವೀಕ್ಷಿಸಲು ಬೃಹತ್ ಎಲ್‌ಇಡಿ ವಾಲ್ ವ್ಯವಸ್ಥೆ ಮಾಡಲಾ ಗಿತ್ತು. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದ ದೃಶ್ಯ ಎಲ್‌ಇಡಿ ವಾಲ್‌ನಲ್ಲಿ ಪ್ರಸಾರವಾಗುತ್ತಿದ್ದಂತೆ ಕಾರ್ಯಕರ್ತರು ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು. ಪಟಾಕಿ ಸಿಡಿಸಿ, ಸಿಹಿ ಹಂಚಿ, ಸಂತಸ ವ್ಯಕ್ತ ಪಡಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾರ್ವಜನಿಕರು ಮತ್ತು ಕಾರ್ಯಕರ್ತರಿಗಾಗಿ ಉಪ ಹಾರದ ವ್ಯವಸ್ಥೆ ಮಾಡಲಾಗಿತ್ತು.

ಬನವಾಸೆ ರಂಗಸ್ವಾಮಿ ಅವರು ಮಾತನಾಡಿ, ರಾಜ್ಯದ ಅಭಿವೃದ್ಧಿಗೆ ಡಿ.ಕೆ.ಶಿವಕುಮಾರ್ ಅವರ ನಾಯಕತ್ವ ಹೊಸ ದಿಕ್ಕು ನೀಡಲಿದ್ದು, ಕಾಂಗ್ರೆಸ್ ಸರ್ಕಾರ ಜನಪರ ಆಡಳಿತ ನೀಡಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಪಕ್ಷದ ಸಂಘಟನೆ ಬಲವರ್ಧನೆ ಮತ್ತು ಅಭಿವೃದ್ಧಿ ಕಾರ್ಯ ಗಳಿಗೆ ಹೊಸ ಚೈತನ್ಯ ಸಿಗಲಿದೆ. ಕಾರ್ಯಕ್ರಮದಲ್ಲಿ ಪಕ್ಷದ ಹಿರಿಯ ಹಾಗು ಯುವ ಮುಖಂಡರು, ವಿವಿಧ ಘಟಕಗಳ ಅಧ್ಯಕ್ಷರು, ಉಪಾಧ್ಯಕ್ಷರು, ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳು ಭಾಗ ವಹಿಸಿ ಹರ್ಷ ವ್ಯಕ್ತಪಡಿಸಿದ್ದಾ ರೆಂದು ಹೇಳಿದರು.

ಡಿ.ಕೆ.ಶಿವಕುಮಾರ್ ಅವರ ಮುಖ್ಯಮಂತ್ರಿ ಪದಗ್ರಹಣವನ್ನು ಐತಿಹಾಸಿಕ ಕ್ಷಣವೆಂದು ಬಣ್ಣಿಸಿದ ಕಾರ್ಯಕರ್ತರು, ರಾಜ್ಯದಾದ್ಯಂತ ಕಾಂಗ್ರೆಸ್ ಬೆಂಬಲಿಗರಲ್ಲಿ ಹೊಸ ಉತ್ಸಾಹ ಮೂಡಿದ್ದು, ಹಾಸನ ದಲ್ಲಿಯೂ ಅದೇ ಸಂಭ್ರಮದ ವಾತಾ ವರಣ ಕಂಡುಬಂದಿತು.

## ಸತತ ಶ್ರಮ, ತ್ಯಾಗಕ್ಕೆ ಡಿಕೆಶಿಗೆ ಸಿಎಂ ಹುದ್ದೆ

### ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ ಸಂತಸ

• ಪ್ರಜೋದಯ ವರದಿ




**ಹಾಸನ:** ಕಾಂಗ್ರೆಸ್ ಪಕ್ಷಕ್ಕಾಗಿ ಸತತ ಶ್ರಮ, ತ್ಯಾಗ ಹಾಗು ಸೇವೆ ಸಲ್ಲಿಸಿರುವ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ದೊರೆತಿರುವುದು ಪಕ್ಷದ ಕಾರ್ಯ ಕರ್ತರಿಗೆ ಸಂತಸ ತಂದಿದೆ ಎಂದು ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿಯ ನಿರ್ಧಾರ ದಿಂದ ಡಿ.ಕೆ.ಶಿವಕುಮಾರ್ ಮುಖ್ಯ ಮಂತ್ರಿ ಹುದ್ದೆ ಅಲಂಕರಿಸುತ್ತಿದ್ದಾರೆ. ಈ ನಡೆ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಮಾದರಿಯಾಗಲಿದೆ. ಮುಂದಿನ ಪೀಳಿಗೆಗೆ ಮಾದರಿಯಾಗಿ ಉಳಿಯಲಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರ ಆಡಳಿತ ಹಾಗೂ ರಾಜ್ಯಕ್ಕೆ ನೀಡಿರುವ ಕೊಡುಗೆ ಶ್ಲಾಘನೀಯವಾಗಿದೆ. ಜಿಲ್ಲೆಯಲ್ಲಿ ಐಟಿ ಕಂಪನಿಗಳು ಹಾಗು ಐಟಿ ಹಬ್ ಸ್ಥಾಪಿಸುವುದು ತಮ್ಮ ಬಹುಕಾಲದ ಕನಸಾ ಗಿದ್ದು, ಈ ಕುರಿತು ನೂತನ ಮುಖ್ಯಮಂತ್ರಿಗೆ ಮನವಿ ಸಲ್ಲಿಸ ಲಾಗುವುದು. ಐಟಿ ಕ್ಷೇತ್ರದ ಅಭಿ ವೃದ್ಧಿಯಿಂದ ಜಿಲ್ಲೆಯ ಯುವಕ-ಯುವತಿಯರಿಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಯಾಗಿ, ತಮ್ಮ ಊರಿನಲ್ಲಿಯೇ ಉತ್ತಮ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಬಲಿಷ್ಠವಾಗಲಿದ್ದು, 2028ರ ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯ ಏಳು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲುವು ಸಾಧಿಸುವ ವಿಶ್ವಾಸವಿದೆ ಎಂದರು.

ನೂತನ ಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರು ಮುಂದಿನ ದಿನಗಳಲ್ಲಿ ಪಕ್ಷವನ್ನು ಇನ್ನಷ್ಟುಬಲಗೊಳಿಸಲಿದ್ದಾರೆ. ಜೊತೆಗೆ ನಾನು ಕೂಡ ಪಕ್ಷದಲ್ಲಿ ಹಲವು ವರ್ಷಗಳಿಂದ ದುಡಿದ ಕಾರ್ಯ ಕರ್ತರ ಕಷ್ಟಗಳಿಗೆ ಧ್ವನಿಯಾಗುವ ಮೂಲಕ ಪಕ್ಷ ಕಟ್ಟುವ ಕೆಲಸ ಮಾಡುವೆ ಎಂದು ಹೇಳಿದರು. ಪಕ್ಷದ ಮುಖಂಡರಾದ ಭೂದೇಶ್, ಆರೀಫ್, ವೆಂಕಟೇಶ್‌ಗೌಡ, ರಘು ದಾಸರಕೊಪ್ಪಲು, ಅನಿಲ್ ಇದ್ದರು.

## ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ಸ್ಪಷ್ಟನೆ: ವಂಚನೆಗೆ ಒಳಗಾಗದಂತೆ ಮನವಿ

# ಹೆಚ್‌ಡಿಸಿಸಿ ಬ್ಯಾಂಕ್‌ನಲ್ಲಿ ನೇಮಕಾತಿ ನಡೆಯುತ್ತಿಲ್ಲ

• ಪ್ರಜೋದಯ ವರದಿ



**ಹಾಸನ:** ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಯಾವುದೇ ಹುದ್ದೆಯ ನೇಮಕಾತಿಗೆ ಅರ್ಜಿ ಆಹ್ವಾನಿಸಿಲ್ಲ. ಉದ್ಯೋಗದ ಆಮಿಷ ಒಡ್ಡಿ ಹಣ ಪಡೆದಿರುವ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ಪ್ರಕರಣ ದಾಖಲಿಸುವುದಾಗಿ ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರಲ್ಲಿ ವಿವಿಧ ದರ್ಜೆಯ ಒಟ್ಟು 83 ಹುದ್ದೆಗಳ ನೇಮಕಾತಿಗಾಗಿ ಸರ್ಕಾರದಿಂದ ಅನುಮತಿ ಪಡೆದು ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನೂ ನಡೆಸಲಾಗಿತ್ತು. ಪರೀಕ್ಷೆ ಪೂರ್ಣಗೊಂಡು ಮುಂದಿನ ಹಂತದ ಪ್ರಕ್ರಿಯೆ ಆರಂಭಗೊಳ್ಳಬೇಕಿದ್ದಾಗ ನೇಮಕಾತಿ ಪ್ರಕ್ರಿಯೆಗೆ ಸರ್ಕಾರ ತಾತ್ಕಾಲಿಕ ತಡೆ ನೀಡಿತ್ತು. ಈ ಆದೇಶ ಪ್ರಶ್ನಿಸಿ ಬ್ಯಾಂಕ್‌ನ ಆಡಳಿತ ಮಂಡಳಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ ಪರಿಶೀಲನೆಯಲ್ಲಿದೆ. ಅಲ್ಲಿಂದ ಇಲ್ಲಿಯವರೆಗೆ ಯಾವುದೇ ಅಧಿಸೂಚನೆ, ನೇಮಕಾರಿ ಪ್ರಕ್ರಿಯೆ ಬ್ಯಾಂಕ್‌ನಿಂದ ನಡೆದಿಲ್ಲ ಎಂದು ಸಷ್ಟಪಡಿಸಿದರು.

ಈ ನೇಮಕಾತಿಯಲ್ಲಿ 54 ಕಿರಿಯ ಸಹಾಯಕ, 7 ಐಟಿ ಸೂಪರ್‌ವೈಸರ್ ಹಾಗು 22 ಅಟೆಂಡರ್ ಹುದ್ದೆಗಳು ಸೇರಿದ್ದವು. 2018ರ ನವೆಂಬರ್ 5ರಂದು ಅಧಿಕೃತ ಅಧಿಸೂಚನೆ ಪ್ರಕಟಗೊಂಡ ಬಳಿಕ ಸಾವಿರಾರು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ನೇಮಕಾತಿ ಪ್ರಕ್ರಿಯೆಯ ಭಾಗವಾಗಿ ಐಟಿ ಸೂಪರ್‌ವೈಸರ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದ 516 ಅಭ್ಯರ್ಥಿಗಳಿಗೆ 2019ರ ಫೆಬ್ರವರಿ 10 ರಂದು, ಅಟೆಂಡರ್ ಹುದ್ದೆಗೆ ಅರ್ಹರಾದ 2,651 ಅಭ್ಯರ್ಥಿಗಳಿಗೆ 2019 ಜೂ. 16 ರಂದು, ಕಿರಿಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದ 3,541 ಅಭ್ಯರ್ಥಿಗಳಿಗೆ 2019 ಜೂ.30ರಂದು ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿತ್ತು. ಕೆಲ ಸಮಾಜ ಘಾತುಕರು ಈ ಪರಿಸ್ಥಿತಿ ದುರುಪಯೋಗಪಡಿಸಿಕೊಂಡು ಹೆಚ್‌ಡಿಸಿಸಿ ಬ್ಯಾಂಕ್‌ನಲ್ಲಿ ಉದ್ಯೋಗ ನೇಮಕಾತಿ ಮಾಡಿಕೊಳ್ಳ ಲಾಗುತ್ತಿದೆ. ನಿಮಗೆ ಕೆಲಸ ಕೊಡಿಸುವುದಾಗಿ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ದೂರು ಕೇಳಿ ಬಂದಿವೆ ಎಂದು ಹೇಳಿದರು.

2018–19 ರಿಂದ ಈಚೆಗೆ ಯಾವುದೇ ಹುದ್ದೆಗೆ ಅರ್ಜಿ ಆಹ್ವಾನಿಸಿಲ್ಲ. ಪರೀಕ್ಷೆಗಳನ್ನೂ ನಡೆಸುತ್ತಿಲ್ಲ. ಕೆಲವರು ಅಮಾಯಕರಿಗೆ ಉದ್ಯೋಗದ ಆಮಿಷ ಒಡ್ಡಿ ಹಣ ವಂಚನೆ ಮಾಡುತ್ತಿ ರುವ ದೂರು ಕೇಳಿ ಬಂದಿವೆ. ಈ ಸಂಬಂಧ ಆಂತರಿಕ ತನಿಖೆ ಜೊತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೂ ದೂರು ನೀಡಲಾಗಿದೆ. ಈ ರೀತಿಯ ಆಮಿಷಗಳಿಗೆ ಜನರು ಬಲಿಯಾಗ ಬಾರದೆಂದು ಮನವಿ ಮಾಡಿದರು.

ಕೆಲವರು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹಿ ನಕಲಿ ರೂಪದಲ್ಲಿ ಸ್ಕ್ಯಾನ್ ಮಾಡಿ, ಬ್ಯಾಂಕಿನ ಲೆಟರ್‌ಹೆಡ್‌ನ್ನೂ ನಕಲು ಮಾಡಿ ಬಳಸಿರುವುದು ಪತ್ತೆಯಾಗಿದೆ. 2024ರ ದಿನಾಂಕ ನಮೂದಿಸಿ ಲಿಖಿತ ಪರೀಕ್ಷೆ ಪ್ರವೇಶ ಪತ್ರಗಳನ್ನೇ ಹೋಲುವ ನಕಲಿ ದಾಖಲೆ ಸೃಷ್ಟಿಸಿ ಅಭ್ಯರ್ಥಿಗಳಿಗೆ ಕಳುಹಿಸಿರುವ ಪ್ರಕರಣ ಬೆಳಕಿಗೆ ಬಂದಿವೆ. ಅದರಲ್ಲಿ ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆ ಇಲ್ಲ. 2020ರಲ್ಲೂ ಹೀಗೆ ಆಗಿತ್ತು. ಆಗಲೂ ಎಸ್‌ಪಿಗೆ ದೂರು ನೀಡಿದ್ದೇವು ಎಂದರು.

ಸುಳ್ಳು ಹೇಳಿ ಉದ್ಯೋಗದ ಹೆಸರಿನಲ್ಲಿ ಹಣ ಪಾವತಿಸುವುದು, ಮಧ್ಯವರ್ತಿಗಳ ಮಾತು ನಂಬುವುದು ಅಥವಾ ಸಾಮಾಜಿಕ ಜಾಲತಾಣ ಗಳಲ್ಲಿ ಹರಿದಾಡುವ ದಾಖಲೆಗಳನ್ನು ನಂಬುವುದು ಅಪಾಯಕಾರಿ. ಸರ್ಕಾರದ ನಿಯಮಾವಳಿ ಹಾಗು ನ್ಯಾಯಾಲಯದ ನಿರ್ದೇಶನಗಳಿಗೆ ಅನುಗುಣವಾಗಿಯೇ ಮುಂದಿನ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಭವಿಷ್ಯದಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭವಾದರೆ, ಯಾವುದೇ ಮಹತ್ವದ ನಿರ್ಧಾರ ಕೈಗೊಂಡರೂ ಬ್ಯಾಂಕಿನ ಅಧಿಕೃತ ವೆಬ್‌ಸೈಟ್, ಪತ್ರಿಕಾ ಪ್ರಕಟಣೆ ಹಾಗು ದಿನಪತ್ರಿಕೆಗಳ ಮೂಲಕ ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರ್, ನಿರ್ದೇಶಕರಾದ ಹೊನ್ನವಳ್ಳಿ ಸತೀಶ್, ಕಣದಹಳ್ಳಿ ಮಂಜೇಗೌಡ, ಕಬ್ಬಿನಹಳ್ಳಿ ಜಗದೀಶ್, ಗಿರೀಶ್ ಚನ್ನವೀರಪ್ಪ, ಬಿದರಿಕೆರೆ ಜಯರಾಮ್, ಎಂ.ಎ. ನಾಗರಾಜ್ ಇದ್ದರು.

> ಉದ್ಯೋಗಾಕಾಂಕ್ಷಿಗಳು ಹಾಗು ಅವರ ಕುಟುಂಬದವರು ಯಾವುದೇ ಆಮಿಷಗಳಿಗೆ ಬಲಿಯಾಗದೆ ಅನುಮಾನಾಸ್ಪದ ಕರೆಗಳು, ಸಂದೇಶಗಳು ಅಥವಾ ದಾಖಲೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ನೇಮಕಾತಿ ಸಂಬಂಧ ಯಾವುದೇ ಮಾಹಿತಿ ಬೇಕಿದ್ದಲ್ಲಿ ನೇರವಾಗಿ ಬ್ಯಾಂಕಿನ ಪ್ರಧಾನ ಕಚೇರಿ ಸಂಪರ್ಕಿಸಿ ಅಧಿಕೃತ ಮಾಹಿತಿ ಪಡೆಯಬಹುದು.
> –ಸೋಮನಹಳ್ಳಿ ನಾಗರಾಜು, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ

## ಗರ್ಭಕಂಠ ಕ್ಯಾನ್ಸರ್: ಶೇ.70 ರಷ್ಟು ಹೆಚ್‌ಪಿವಿ ಲಸಿಕೆ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ವಿರುದ್ಧ ಹೆಚ್‌ಪಿವಿ ಲಸಿಕೆ ಹಾಕುವ ಕಾರ್ಯ ಶೇ.70 ರಷ್ಟು ಗುರಿ ಸಾಧನೆಯಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿ ಕಾರಿ ಡಾ.ಪುಷ್ಪಲತಾ ಅವರು ತಿಳಿಸಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ತಾಲ್ಲೂಕು ಮಟ್ಟದ ಅಂತರ್ ಇಲಾಖೆ ಅಧಿಕಾರಿಗಳ ಸಮಗ್ರ ರೋಗಗಳ ಕಣ್ಗಾವಲು ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಶೈಕ್ಷಣಿಕ ರಜೆ ಬಂದ ಕಾರಣ ಲಸಿಕೆ ಹಾಕುವ ಕಾರ್ಯ ಶೇ.30 ರಷ್ಟು ಬಾಕಿ ಇದ್ದು, ಶೈಕ್ಷಣಿಕ ವರ್ಷದಲ್ಲಿ ಪೂರ್ಣ ಗೊಳಿಸಲಾಗುವುದು. ಅಪಪ್ರಚಾರಕ್ಕೆ ಕಿವಿಗೊಡದೆ ಪ್ರತಿ ಹೆಣ್ಣು ಮಗುವೂ ಲಸಿಕೆ ಪಡೆದುಕೊಳ್ಳುವುದು ಅಗತ್ಯ. ಲಸಿಕಾ ಕಾರ್ಯಕ್ಕೆ ಶಿಕ್ಷಣ ಇಲಾಖೆಮತ್ತು ಪೋಷಕರುಸಹಕಾರ ನೀಡಬೇಕೆಂದರು.

ಜೂ.28ರಂದುಪಲ್ಸ್ ಪೊಲಿಯೋ ಕಾರ್ಯಕ್ರಮ ನಡೆಯಲಿದ್ದು, ತಾಲ್ಲೂಕಿನಲ್ಲಿ 5 ವರ್ಷ ವಯೋಮಿತಿಯ 10,771 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಿದ್ದು, 102 ಬೂತ್‌ಗಳನ್ನು ತೆರೆಯಲಾಗುವುದು. ಅತಿಸಾರ ನಿಯಂತ್ರಣ ಪಾಕ್ಷಿಕ ಕಾರ್ಯಕ್ರಮದಲ್ಲಿ 6 ವರ್ಷ ವಯೋಮಿತಿಯ ಮಕ್ಕಳಿರುವ ಮನೆಗಳಿಗೆ ಆರೋಗ್ಯ ಕಾರ್ಯಕರ್ತರು ಭೇಟಿ ನೀಡಿ ಒಆರ್‌ಎಸ್ ಪ್ಯಾಕೆಟ್‌ಗಳನ್ನು ವಿತರಿಸುವುದು. ಮಲೇರಿಯಾ ಮಾಸಾಚರಣೆ ಪ್ರಯುಕ್ತ ಸೊಳ್ಳೆಗಳ ನಿಯಂತ್ರಣ ಮತ್ತು ಮಲೇರಿಯ ಬರದಂತೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಜನರಲ್ಲಿ ಅರಿವು ಮೂಡಿಸಲಾಗುವುದು. ಬಾಲ ಸ್ವಾಸ್ಥ್ಯ ಯೋಜನೆ ಕಾರ್ಯಕ್ರಮದಲ್ಲಿ ವೈದ್ಯರು ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆ ಮತ್ತು ಸಲಹೆ ನೀಡುವರು ಎಂದು ಮಾಹಿತಿ ನೀಡಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಕೆ.ಟಿ. ಪರಮೇಶ್, ಆಶಾಮೆಂಟರ್ ಕವಿತ, ಆರೋಗ್ಯ ನಿರೀಕ್ಷಕರಾದ ಮೋಹನ್, ಜಯರಾಮ್ ಉಪಸ್ಥಿತರಿದ್ದರು.

## ವಿಧಾನಸೌಧ ಮುತ್ತಿಗೆ ಹಾಕಲು ರೈತರ ಪಯಣ

### ರೈತರ ಭೂಮಿ, ಕೃಷಿ ಹಕ್ಕುಗಳ ರಕ್ಷಣೆಗಾಗಿ ಒತ್ತಾಯ

• ಪ್ರಜೋದಯ ವರದಿ



**ಹಾಸನ:** ರಾಜ್ಯದ ರೈತರ ಭೂಮಿ, ಬದುಕು ಮತ್ತು ಕೃಷಿ ಹಕ್ಕುಗಳ ರಕ್ಷಣೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆಯಿಂದ ಜಿಲ್ಲೆಯ ರೈತರು ವಿಧಾನಸೌಧ ಮುತ್ತಿಗೆ ಹಾಕಲು ಬುಧವಾರ ಪ್ರಯಾಣ ಬೆಳೆಸಿದರು.

ಈ ವೇಳೆ ಮಾತನಾಡಿದ ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಅವರು, ಚಿಕ್ಕಬಳ್ಳಾಪುರದಲ್ಲಿ 81 ದಿನಗಳಿಂದ ನಡೆಯುತ್ತಿರುವ ನಿರಂತರ ಧರಣಿ ಹೋರಾಟದ ಮುಂದುವರಿದ ಭಾಗವಾಗಿ ಬೈಕ್ ರ್‍ಯಾಲಿ ಹಾಗು ವಿಧಾನಸೌಧ ಮುತ್ತಿಗೆ ಪ್ರತಿಭಟನೆ ರೂಪುಗೊಂಡಿದೆ. ಶುಕ್ರವಾರ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರ ನೇತೃತ್ವದಲ್ಲಿ ವಿಧಾನಸೌಧ ಮುತ್ತಿಗೆ ಕಾರ್ಯ ಕ್ರಮ ನಡೆಯಲಿದೆ. ಅದರಲ್ಲಿ ಭಾಗಿಯಾಗಲು ನಾವೆಲ್ಲರೂ ಹೊರಟಿದ್ದೇವೆಂದು ತಿಳಿಸಿದರು.

ರಾಜ್ಯ ಸರ್ಕಾರ ಕೈಗಾರಿಕಾ ಅಭಿವೃದ್ಧಿ ಹೆಸರಿನಲ್ಲಿ ಫಲವತ್ತಾದ ಕೃಷಿ ಭೂಮಿ ಸ್ವಾಧೀನಪಡಿಸಿ ಕೊಳ್ಳುವ ಮೂಲಕ ರೈತ ಸಮುದಾಯವನ್ನು ಸಂಕಷ್ಟಕ್ಕೆ ತಳ್ಳುತ್ತಿದೆ. ಕಳೆದ ಎರಡು ದಶಕಗಳಲ್ಲಿ ಕೈಗಾರಿಕೆಗಳಿಗಾಗಿ ಲಕ್ಷಾಂತರ ಎಕರೆ ಭೂಮಿ ಸ್ವಾಧೀನ ಪಡಿಸಿಕೊಂಡಿದ್ದರೂ, ಅದರಲ್ಲಿ ಬಹುಪಾಲು ಭೂಮಿ ಕೈಗಾರಿಕಾ ಉದ್ದೇಶಕ್ಕೆ ಬಳಕೆಯಾಗದೆ ಖಾಲಿ ಬಿದ್ದಿದೆ. ಇದು ರೈತರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದೆ. ಕೃಷಿ ಆಧಾರಿತ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಕುಸಿಯುವಂತೆ ಮಾಡುತ್ತಿದೆ ಎಂದು ದೂರಿದರು.

ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಗ್ರಾಮಗಳ ಸುಮಾರು 2,823 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ರೈತರಿಗೆ ಆತಂಕ ತರಿಸಿದೆ. ಅದನ್ನು ಖಂಡಿಸಿ ಇತ್ತೀಚೆಗೆ ಪ್ರತಿಭಟನೆ ನಡೆಸಿದ ವೇಳೆ ಸರ್ಕಾರ ಹೋರಾಟಗಾರರ ಮೇಲೆ ಬಲಪ್ರಯೋಗ ನಡೆಸಿರುವುದು ಖಂಡನೀಯ. ಇದು ಶಿಡ್ಲಘಟ್ಟಕ್ಕೆ ಮಾತ್ರ ಸೀಮಿತವಲ್ಲ, ರಾಜ್ಯದ ಸಾವಿರಾರು ಗ್ರಾಮಗಳಲ್ಲಿ ಇಂಥಹ ಪ್ರಕ್ರಿಯೆ ನಡೆದಿದೆ. ಇದು ನಿಲ್ಲಬೇಕು. ರೈತರ ಹಿತಾಸಕ್ತಿಗೆ ಧಕ್ಕೆ ತರುವ ತಿದ್ದುಪಡಿಗಳನ್ನು ಸರ್ಕಾರ ಹಿಂಪಡೆಯಬೇಕು. ರೈತರ ಒಪ್ಪಿಗೆ ಇಲ್ಲದೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬಾರದೆಂಬುದು ಹೋರಾಟದ ಪ್ರಮುಖ ಉದ್ದೇಶ ಎಂದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಮುಖಂಡರು, ಮಹಿಳೆಯರು ಹಾಜರಿದ್ದರು.

## ಕೆಪಿಎಸ್ ಶಾಲಾ ಪ್ರಯೋಗಾಲಯದಲ್ಲಿ ಬೆಂಕಿ

• ಪ್ರಜೋದಯ ವರದಿ




**ಹೆತ್ತೂರು:** ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಬೆಂಕಿ ಅವಘಡದಲ್ಲಿ ಕೆಪಿಎಸ್ ಶಾಲೆಯ ಪ್ರಯೋಗಾಲಯ ಸಂಪೂರ್ಣವಾಗಿ ಸುಟ್ಟುಹೋಗಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ನಾಶವಾಗಿವೆ.

ಬುಧವಾರ ಮಧ್ಯಾಹ್ನದ ಊಟದ ಸಮಯದಲ್ಲಿ ವಿದ್ಯುತ್ ಅವಘಡದಿಂದ ಪ್ರಯೋ ಗಾಲಯದ ಕೊಠಡಿಯಿಂದ ಹೊಗೆ ಕಾಣಿಸಿಕೊಂಡಿದೆ. ತಕ್ಷಣ ಎಚ್ಚೆತ್ತ ಶಾಲೆಯ ಶಿಕ್ಷಕರು ಹಾಗು ವಿದ್ಯಾರ್ಥಿಗಳು ಮಣ್ಣು ಮತ್ತು ನೀರು ಬಳಸಿ ಬೆಂಕಿ ನಂದಿಸಲು ಹರಸಾಹಸ ಪಟ್ಟರೂ ಬೆಂಕಿಯ ತೀವ್ರತೆ ಹೆಚ್ಚಾಗಿದ್ದರಿಂದ ಪ್ರಯತ್ನ ವಿಫಲವಾಗಿದೆ.

ಪ್ರಯೋಗಾಲಯದಲ್ಲಿದ್ದ ಸುಮಾರು 25 ಕಂಪ್ಯೂಟರ್‌ಗಳು, 20ಕ್ಕೂ ಹೆಚ್ಚು ಡೆಸ್ಕ್‌ಗಳು, ಟಿವಿ ಹಾಗು ವಿವಿಧ ಪ್ರಯೋಗಾಲಯ ಉಪಕರಣ ಗಳು ಬೆಂಕಿಗೆ ಆಹುತಿಯಾಗಿವೆ. ಅಗ್ನಿ ಅವಘಡದ ಸುದ್ದಿ ತಿಳಿದು ಅಗ್ನಿ ಶಾಮಕದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರೂ, ಅವರು ತಲುಪುವಷ್ಟರಲ್ಲಿ ಪ್ರಯೋಗಾಲಯದ ಕೊಠಡಿ ಸಂಪೂರ್ಣ ಸುಟ್ಟುಹೋಗಿತ್ತು.

ಘಟನೆಯಿಂದ ಶಾಲೆಯ ಶೈಕ್ಷಣಿಕ ಚಟುವಟಿಕೆಗಳಿಗೆ ಅಗತ್ಯವಾಗಿದ್ದ ಪ್ರಮುಖ ಉಪಕರಣ ಗಳು ನಾಶವಾಗಿದ್ದು, ವಿದ್ಯಾರ್ಥಿಗಳ ಅಧ್ಯಯನಕ್ಕೂ ತಾತ್ಕಾಲಿಕ ಅಡಚಣೆ ಉಂಟಾಗಿದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ವಿದ್ಯಾರ್ಥಿಗಳನ್ನು ಸುರಕ್ಷಿತ ವಾಗಿ ಹೊರಗೆ ಕಳುಹಿಸಿದ್ದರಿಂದ ಯಾವುದೇ ಅಪಾಯ ಸಂಭವಿಸಿಲ್ಲ.

ಈ ಕುರಿತು ಮಾಹಿತಿ ನೀಡಿದ ಶಾಲೆಯ ಪ್ರಾಂಶುಪಾಲ ಮಂಜುನಾಥ್, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅವಘಡ ಸಂಭವಿಸಿದ್ದು, ಸುಮಾರು 65 ಲಕ್ಷಕ್ಕೂ ಅಧಿಕ ಮೌಲ್ಯದ ಕಂಪ್ಯೂಟರ್‌ಗಳು, ಪೀಠೋಪಕರಣಗಳು ಹಾಗು ಪ್ರಯೋಗಾಲಯದ ಉಪಕರಣಗಳು ಬೆಂಕಿಗೆ ಆಹುತಿಯಾಗಿವೆ ಎಂದು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಸಂಬಂಧಿಸಿದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಬೆಂಕಿ ಅವಘಡದ ನಿಖರ ಕಾರಣದ ಕುರಿತು ಪರಿಶೀಲನೆ ನಡೆದಿದೆ.

## ನಿನಗೇನಾದರೂ ಹುಚ್ಚು ಹಿಡಿದಿದೆಯೇ: ನೆತನ್ಯಾಹು ನಿಂದಿಸಿದ್ದನ್ನು ಒಪ್ಪಿಕೊಂಡ ಟ್ರಂಪ್

• ಪ್ರಜೋದಯ ವರದಿ

**ಬೈರೂತ್:** ದೂರವಾಣಿ ಕರೆಯಲ್ಲಿ ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರನ್ನು ಹುಚ್ಚ ಎಂದು ಕರೆದಿದ್ದನ್ನು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಕೊಂಡಿದ್ದಾರೆ.

ಬುಧವಾರ ಸಂದರ್ಶನವೊಂದರಲ್ಲಿ ಮಾತನಾಡಿದ ಟ್ರಂಪ್, ಲೆಬನಾನ್ ಮೇಲಿನ ಇಸ್ರೇಲ್ ದಾಳಿಯಿಂದಾಗಿ ಇರಾನ್ ಜೊತೆಗಿನ ಶಾಂತಿ ಮಾತುಕತೆಗೆ ಹಿನ್ನಡೆ ಉಂಟಾಗುತ್ತಿದೆ. ಅದರಿಂದ ಬೇಸರವಾಗಿದೆ ಎಂದು ಅವರು ಹೇಳಿದ್ದಾರೆ.

ಉಭಯ ದೇಶಗಳ ನಡುವಿನ ವೈಮನಸ್ಸನ್ನು ಒಪ್ಪಿಕೊಂಡಿದ್ದರೂ ಸಹ, ನೆತನ್ಯಾಹು ಅವರೊಂದಿಗಿನ ತಮ್ಮ ಸಂಬಂಧವು ಗಟ್ಟಿಯಾಗಿದೆ ಎಂದು ಟ್ರಂಪ್ ಒತ್ತಿ ಹೇಳಿದ್ದಾರೆ. ಯುದ್ಧಕಾಲದ ನಾಯಕರಾಗಿರುವುದರಿಂದ ನಮ್ಮಿಬ್ಬರ ನಡುವೆ ಉತ್ತಮ ಬಾಂಧವ್ಯವಿದೆ ಎಂದಿದ್ದಾರೆ.

ನನಗೆ ನೆತನ್ಯಾಹು ತುಂಬಾ ಇಷ್ಟ, ನಾವು ಒಟ್ಟಿಗೆ ತುಂಬಾ ಚೆನ್ನಾಗಿ ಕೆಲಸ ಮಾಡಿದ್ದೇವೆ. ಮುಂದೆಯು ನಾನು ಅವರೊಂದಿಗೆ ಕೆಲಸ ಮಾಡುತ್ತೇನೆಂದು ಟ್ರಂಪ್ ನ್ಯೂಯಾರ್ಕ್ ಪೋಸ್ಟ್‌ನ ಪಾಡ್ ಪೋರ್ಸ್ ಒನ್‌ಗೆ ತಿಳಿಸಿದ್ದಾರೆ.

ಲೆಬನಾನ್ ಮೇಲಿನ ಇಸ್ರೇಲ್ ದಾಳಿಯನ್ನು ಖಂಡಿಸಿ, ಅಮೇರಿಕಾದೊಂದಿಗಿನ ಶಾಂತಿ ಒಪ್ಪಂದದ ಮಾತು ಕತೆಯನ್ನು ಕೊನೆಗೊಳಿಸುವುದಾಗಿ ಇರಾನ್ ಎಚ್ಚರಿಸಿತ್ತು. ಈ ಬೆನ್ನಲ್ಲೇ ಟ್ರಂಪ್ ಅವರು ನೆತನ್ಯಾಹು ಅವರಿಗೆ ದೂರವಾಣಿ ಕರೆ ಮಾಡಿ ಬೈರೂತ್ ಮೇಲಿನ ದಾಳಿ ನಿಲ್ಲಿಸುವಂತೆ ತಾಕೀತು ಮಾಡಿದ್ದರು. ಮಾತುಕತೆ ಸಂದರ್ಭದಲ್ಲಿ ಅಸಭ್ಯ ಹಾಗೂ ಅಶ್ಲೀಲ ಪದಗಳನ್ನು ಬಳಸಿ, ನೆತನ್ಯಾಹು ಅವರ ಮೇಲೆ ಟ್ರಂಪ್ ಟೀಕಾಪ್ರಹಾರ ಮಾಡಿದ್ದಾರೆಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ನಿನಗೇನಾದರೂ ಹುಚ್ಚು ಹಿಡಿದಿದೆಯೇ? ಇಂಥಹ ನಡೆಯಿಂದಾಗಿ ಈಗ ಎಲ್ಲರೂ ಇಸ್ರೇಲ್ ಅನ್ನು ದ್ವೇಷಿಸುತ್ತಿದ್ದಾರೆ. ನಾನೇನಾದರೂ ನಿನ್ನ ಬೆಂಬಲಕ್ಕೆ ಇರದೇ ಹೋಗಿದ್ದರೆ ಇಷ್ಟು ಹೊತ್ತಿಗೆ ನೀನು ಜೈಲಿನಲ್ಲಿ ಇರುತ್ತಿದ್ದೆ ಎಂದು ನೆತನ್ಯಾಹು ಅವರನ್ನು ಟ್ರಂಪ್ ತರಾಟೆಗೆ ತೆಗೆದು ಕೊಂಡಿದ್ದಾರೆಂದು ಅಮೇರಿಕಾದ ಮಾಧ್ಯಮ ಸಂಸ್ಥೆ ಆ್ಯಕ್ಸಿಯೋಸ್‌ವರದಿ ಮಾಡಿತ್ತು.

## ಕುವೈತ್, ಬಹರೇನ್ ಗುರಿಯಾಗಿಸಿ ಇರಾನ್ ದಾಳಿ: ಅಮೇರಿಕಾ ಪ್ರತಿ ದಾಳಿ

• ಪ್ರಜೋದಯ ವರದಿ



**ವಾಷಿಂಗ್ಟನ್:** ಕುವೈತ್ ಮತ್ತು ಬಹರೇನ್‌ನಲ್ಲಿರುವ ಅಮೇರಿಕಾದ ನೆಲೆಗಳನ್ನು ಗುರಿಯಾಗಿಸಿ ಕೊಂಡು ಇರಾನ್ ಕ್ಷಿಪಣಿ, ಡ್ರೋನ್ ದಾಳಿ ನಡೆಸಿದೆ ಎಂದು ವರದಿಯಾಗಿದೆ.

ಕುವೈತ್ ಮತ್ತು ಬಹರೇನ್ ಕಡೆಗೆ ಇರಾನ್ ಹಾರಿಸಿದ ಕ್ಷಿಪಣಿ, ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಮೇರಿಕಾ ಸೇನೆ ತಿಳಿಸಿದೆ. ಅದಕ್ಕೆ ಪ್ರತೀಕಾರವಾಗಿ ಇರಾನ್‌ನ ಸೇನಾ ನೆಲೆ ಮೇಲೆ ದಾಳಿ ನಡೆಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

ದೇಶದ ವಿವಿಧ ಭಾಗಗಳಲ್ಲಿ ಭಾರಿ ಸ್ಫೋಟದ ಶಬ್ದ ಕೇಳಿಬಂದಿದೆ. ವೈಮಾನಿಕ ಬೆದರಿಕೆ ತಡೆಯಲು ವಾಯು ರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಲಾಗಿದೆ. ಇರಾನ್‌ನ ಕ್ಷಿಪಣಿ, ಡ್ರೋನ್‌ಗಳನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದೇವೆಂದು ಕುವೈತ್ ಹೇಳಿದೆ.

ಅಮೇರಿಕಾ ಮತ್ತು ಇಸ್ರೇಲ್ ಜೊತೆಗಿನ ಕದನ ವಿರಾಮದ ವಿಸ್ತರಣೆಗೆ ಸಂಬಂಧಿಸಿದಂತೆ ಮಧ್ಯಸ್ಥಿಕೆಗಾರರೊಂದಿಗಿನ ಸಂವಹನವನ್ನು ಇರಾನ್ ಸ್ಥಗಿತಗೊಳಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ವರದಿಗಳನ್ನು ತಳ್ಳಿಹಾಕಿದ್ದು, ಮಾತುಕತೆ ಇನ್ನೂ ಮುಂದುವರಿದಿದೆ ಎಂದು ಒತ್ತಿ ಹೇಳಿದ್ದಾರೆ. ಅಮೇರಿಕಾ–ಇರಾನ್ ಶಾಂತಿ ಪ್ರಯತ್ನಗಳ ಬಗ್ಗೆ ಅನಿಶ್ಚಿತತೆ ಮೂಡಿದ ಕೆಲವೇ ಗಂಟೆಗಳಲ್ಲಿ ಹೊಸ ದಾಳಿಗಳು ನಡೆದಿವೆ.

### ಒಬ್ಬ ಭಾರತೀಯ ಸಾವು


ದುಬೈ: ಕುವೈತ್ ಮತ್ತು ಬಹರೇನ್ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ ಎಂದು ಅಮೇರಿಕಾ ಸೇನೆ ತಿಳಿಸಿದೆ.

ಕುವೈತ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ನಡೆಸಿದ ವೈಮಾನಿಕ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ದುಃಖಿತ ಕುಟುಂಬ ಮತ್ತು ಗಾಯಾಳುಗಳಿಗೆ ಸಾಧ್ಯವಾದಷ್ಟು ನೆರವು ನೀಡಲು ಕುವೈತ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆಂದು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ತಿಳಿಸಿದೆ.

## ಹಾಸನಾಂಬದೇವಿ ನಾಗರಿಕರ ವೇದಿಕೆ ಸ್ಥಾಪನೆ

• ಪ್ರಜೋದಯ ವರದಿ



**ಹಾಸನ:** ಸಮಾಜದ ಅಭಿವೃದ್ಧಿ, ಬಡವರ ಕಲ್ಯಾಣಕ್ಕಾಗಿ ಹಾಸನಾಂಬ ದೇವಿ ನಾಗರಿಕರ ವೇದಿಕೆ ಸ್ಥಾಪಿಸಲಾಗಿದೆ ಎಂದು ಅಧ್ಯಕ್ಷ ಲೋಕೇಶ್ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಆಶೀರ್ವಾದ ಹಾಗು ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ವೇದಿಕೆಯು ಸಮಾಜಮುಖಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಿದೆ. 2026–27ನೇ ಸಾಲಿನಲ್ಲಿ ಹಲವು ಮಹತ್ವದ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿಗೆ ತರಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಬಡ ಮಕ್ಕಳಿಗೆ ಉಚಿತ ಶಿಕ್ಷಣಕ್ಕೆ ಸಹಕಾರ ನೀಡುವುದು, ಪ್ರತಿ ತಿಂಗಳು ಒಂದು ದೇವಸ್ಥಾನ ಸ್ವಚ್ಛಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಉಚಿತ ಹೊಲಿಗೆ ಮತ್ತು ಕಂಪ್ಯೂಟರ್ ತರಬೇತಿ ನೀಡುವುದು ಸೇರಿ ಹಲವು ಯೋಜನೆ ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಎಲ್ಲಾ ವರ್ಗಗಳ ವಧು-ವರರಿಗೆ ಪ್ರತಿ ವರ್ಷ 108 ಉಚಿತ ಸಾಮೂಹಿಕ ವಿವಾಹ ಆಯೋಜಿಸುವುದು, ಗೃಹ ಕೈಗಾರಿಕಾ ಉತ್ಪನ್ನಗಳ ಪ್ಯಾಕಿಂಗ್ ಹಾಗೂ ಮಾರುಕಟ್ಟೆ ವ್ಯವಸ್ಥೆಗೆ ನೆರವು ನೀಡುವುದು, ರೈತಾಪಿ ಕುಟುಂಬಗಳಿಗೆ ಕೃಷಿ ಸಾಲ ಹಾಗೂ ಸ್ಥಳೀಯ ಬೀಜ ಪ್ರಭೇದ ಬಳಸಿ ಬೆಳೆ ಬೆಳೆಯಲು ಪ್ರೋತ್ಸಾಹ ನೀಡುವುದು ಸೇರಿ ವಿವಿಧ ಕಾರ್ಯಕ್ರಮ ಕೈಗೊಳ್ಳಲಾಗುವುದು. ಹಿಂದುಳಿದ ವರ್ಗಗಳು ಹಾಗು ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಲಾಗಿದ್ದು, ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ವೇದಿಕೆ ಪ್ರಧಾನ ಕಾರ್ಯದರ್ಶಿ ನೀತು ಕೊಠಾರಿ,ಗೌರವಾಧ್ಯಕ್ಷ ಬಿ.ಎನ್. ಮಂಜುನಾಥ್, ಸಹ ಕಾರ್ಯದರ್ಶಿ ವಿಜಯಕುಮಾರ್, ಕಾನೂನು ಸಲಹೆಗಾರ ಟಿ.ಗಣೇಶ್, ಸಂಚಾಲಕ ಶಿವಕುಮಾರ್, ಉಪಾಧ್ಯಕ್ಷೆ ಮಂಜುಳ, ಜಂಟಿ ಕಾನೂನು ಸಲಹೆಗಾರ್ತಿ ಸುಶೀಲಾದೇವಿ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019

CMYK CMYK CMYK CMYK